ಕಲ್ಯಾಣ ಕಿರಣ

ಫೆಬ್ರವರಿ-2014 ಬೆಲೆ-20/-



27ನೇ ಶರಣ ಮೇಳದಲ್ಲಿ ದಿ. 13 ರಂದು ಪೀಠಾರೋಹಣ
ಸಂದೇಶ ನೀಡುತ್ತಿರುವ ಪೂಜ್ಯ ಶ್ರೀ ಮಹಾಜಗದ್ಗುರು ಡಾ॥ ಮಾತಾಜಿ



ಸಂಸತ್ ಸದಸ್ಯ ಪಿ.ಸಿ. ಗದ್ದಿಗೌಡರಿಂದ ಶರಣ ಮೇಳದ ಉದ್ಘಾಟನೆ



ಶರಣ ರತ್ನ ಪ್ರಶಸ್ತಿ ಪ್ರಧಾನ



ಬಸವ ವಚನಾಮೃತ ಎರಡನೆ ಭಾಗ ಬಿಡುಗಡೆ

ಯೋಗಿರಾಜ ಪೊರೆಯಯ್ಯ

ಗುರು ಶಿವನೆ ನಾ ನಿನ್ನ ಅನುದಿನವು ನೆನೆಯುವೆನು
ಪೊರೆಯಯ್ಯ ಮಹಾಯೋಗಿ ಮಂತ್ರ ಪುರುಷ ॥ ಪಲ್ಲವಿ ॥

ಅಂತರಾತ್ಮದಿ ದಿಟ್ಟ ಅನವರತ ನೀನಿಟ್ಟು
ಅನಿಮಿಷ ನೇತ್ರನು ಆಗಿ ನೀ ಮೆರೆದೆ.
ಯೋಗಿಗಳ ಸ್ಫೂರ್ತಿಯು ಆಗಿ ನೀನಿಹೆಯಯ್ಯ । ಈ
ಜಗದ ಪ್ರಪ್ರಥಮ ಯೋಗಿರಾಜ ॥ 1 ॥

ಧಿಮಿತಕಿಟ ಧಿಮಿತಕಿಟ ಹೆಜ್ಜೆಯಂ ಹಾಕುತ್ತಾ
ತಾಳ ಮದ್ದಳೆ ಸಹಿತ ನೀನು ಕುಣಿದೆ
ನಾಟ್ಯ ಶಾಸ್ತ್ರವ ಜಗಕೆ ನೀನಿತ್ತು ಮೆರೆದೆ
ನಟರಾಜ ನೀನೆಂಬ ಖ್ಯಾತಿ ಪಡೆದೆ ॥ 2 ॥

ಗಾನ ಗಂಗೆಯ ಹರಿಸಿ ನಾದಯೋಗಿಯು ಆದೆ
ಕಾಮನಂ ನೀನುರುಹಿ ವಿರಾಗಿಯಾದೆ ॥
ಭಸಿತ- ರುದ್ರಾಕ್ಷಿಗಳೆ ಆಭರಣವಾಗಿರಲು
ಸರಳ ವ್ರತ ಧರಿಸಿರುವ ಮಹತ್ಯಾಗಿಯಾದೆ ॥ 3 ॥

ಶರಣು ಬಂದವರಿಗೆ ಅಭಯ ಹಸ್ತವ ನೀಡಿ
ಮೂಲಿಗನು ನೀನಾದೆ ಶಿವಭಕ್ತಿ ಪಥಕೆ
ನೀನು ತಪಗೈಯ್ದ ದಿನ ಶಿವರಾತ್ರಿಯಾಯಿತ್ತು
ಬನ್ನಗಳ ತಾ ತೊಡೆದು ಭವಬಾಧೆ ಹರಿಯಿತ್ತು. ॥ 4 ॥

ಈ ಜಗದ ಪ್ರಪ್ರಥಮ ಯೋಗಿರಾಜನೆನಿಸಿ
ಮಡದಿ ಪಾರ್ವತಿಗೆ ಯೋಗವಿದ್ಯೆಯ ಕಲಿಸಿ
ಓಂಕಾರ ವಿಭೂತಿ ರುದ್ರಾಕ್ಷಿ ಹೊಂದಿದ
ಪಥವ ನೀಡಿದ ಶಿವಗೆ ಶರಣು ಸಲ್ಲಿಸುವೆ ॥ 5 ॥

-ಮಾತಾಜಿ

ಅಕ್ಕನ ಅಮರವಾಣಿ

ಅಂಗ ಲಿಂಗವ ವೇಧಿಸಿ ಅಂಗ ಲಿಂಗದೊಳಗಾಯಿತ್ತು.
ಮನ ಲಿಂಗವ ವೇಧಿಸಿ ಮನ ಲಿಂಗದೊಳಗಾಯಿತ್ತು
ಭಾವ ಲಿಂಗವ ವೇಧಿಸಿ ಭಾವ ಲಿಂಗದೊಳಗಾಯಿತ್ತು.
ಚನ್ನಮಲ್ಲಿಕಾರ್ಜುನ
ನಿಮ್ಮ ಒಲುವೆಯ ಸಂಗದಲ್ಲಿರ್ದು ಸ್ವಯಲಿಂಗವಾಯಿತ್ತು.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

866666

ಸಂಪುಟ-45 | ಬಸವ ಶಕೆ -880 | ಪಂಚ ವಾರ್ಷಿಕ ಸದಸ್ಯತ್ವ 1000 ರೂ.

ಸಂಚಿಕೆ-02 | ಫೆಬ್ರವರಿ-2014 | ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು.

ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್

ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್

ಬೆಂಗಳೂರು-560010

ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar,Bangalore-560010. Phone : 080-23131476,

Send SMS to 9945806297/ 9738028585/ 8892912123

Email :- kalyanakirana1970@gmail.com

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ದೆಹಲಿಯ ಜಂತರ್ ಮಂತರ್‌ನಲ್ಲಿ 2014ರ ಫೆಬ್ರವರಿ 17 ಮತ್ತು 18ರಂದು ನಡೆಯುವ

ಲಿಂಗಾಯತ ಮಹಾರ್‍ಯಾಲಿ

ವಿಶ್ವಗುರು ಬಸವಣ್ಣನವರಿಂದ 12ನೆಯ ಶತಮಾನದಲ್ಲಿ ಸ್ಥಾಪಿತವಾದ ಲಿಂಗಾಯತವು ಹಿಂದು ಧರ್ಮದೊಳಗಣ ಒಂದು ಜಾತಿಯಲ್ಲ, ಮತವಲ್ಲ, ಪಂಥವಲ್ಲ. ಇದೊಂದು ಸ್ವತಂತ್ರ ಧರ್ಮ. ಯಾವ ಲಕ್ಷಣಗಳಿಂದ, ಯಾವ ಕಾರಣಗಳಿಗಾಗಿ ಜೈನ, ಬೌದ್ಧ ಮತ್ತು ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳೆಂದು ಮಾನ್ಯತೆ ಪಡೆದಿವೆಯೋ ಅವೇ ಕಾರಣಗಳಿಗಾಗಿ ಲಿಂಗಾಯತವು ಸ್ವತಂತ್ರ ಧರ್ಮ. ಈ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಗ್ರಹಿಸಿ ದಿ.29-10-2013ರಂದು ಬೆಂಗಳೂರಿನಲ್ಲಿ ಬೃಹತ್ ರ್‍ಯಾಲಿ ಮಾಡಿ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಲಾಗಿದೆ.

ಇದೀಗ ಕೇಂದ್ರ ಸರ್ಕಾರದ ಗಮನ ಸೆಳೆಯಲು ದೆಹಲಿಯಲ್ಲಿ 2014ರ ಫೆಬ್ರವರಿ 17 ಮತ್ತು 18ರಂದು ಧರಣಿ ಸತ್ಯಾಗ್ರಹ, ಮೆರವಣಿಗೆ ಏರ್ಪಡಿಸಲಾಗಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಧರ್ಮಾಭಿಮಾನಿಗಳು ಬಂದು ಭಾಗವಹಿಸಲು ಕೋರುತ್ತೇವೆ.

– ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕೆಲವು ವಿಶೇಷ ವಿವರ:

ಸತ್ಯಾಗ್ರಹ ನಡೆಯುವ ಸ್ಥಳ : ದೆಹಲಿಯ ಸುಪ್ರಸಿದ್ಧ ಜಂತರ್‌ಮಂತರ್ ಬಳಿ

ದಿನಾಂಕಗಳು : 2014ರ ಫೆಬ್ರವರಿ 17 ಮತ್ತು 18,
ದಿ.18ರಂದು ಮೆರವಣಿಗೆ–ಪಥ ಸಂಚಲನ

ಸಮಯ : ಬೆಳಿಗ್ಗೆ 9 ರಿಂದ ಸಂಜೆ 6

ಪ್ರತಿನಿಧಿಗಳ ವಾಸ್ತವ್ಯಕ್ಕಾಗಿ – ಮಂದಿರ್ ಮಾರ್ಗದಲ್ಲಿರುವ ಹಿಂದು ಮಹಾಸಭಾ, ಬುದ್ಧ ವಿಹಾರ, ಬಿರ್ಲಾ ಮಂದಿರ, ಸೀಸ್ ಗಂಜ್ ಗುರುದ್ವಾರ, ಕೆಲವು ಬರಾತ್‌ಘರ್ (ಕಲ್ಯಾಣ ಮಂಟಪ)ಗಳಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ. ಟ್ರೇನ್‌ಗಳಲ್ಲಿ ಬಂದವರು ಇಳಿದ ಮೇಲೆ ಫೋನ್ ಮಾಡಿ ತಾವು ಹೋಗುವ ಜಾಗ ತಿಳಿದುಕೊಳ್ಳಬೇಕು. ಗುಂಪುಗಳಲ್ಲಿ ಬರುವವರು ತಮ್ಮ ಗುಂಪಿಗೆ ಒಬ್ಬರನ್ನು ನಾಯಕರನ್ನಾಗಿ ಮಾಡಿಕೊಂಡು ಅವರ ಮೂಲಕ ವಿವರಗಳನ್ನು ಪಡೆಯಬೇಕು.

ದೆಹಲಿಯಲ್ಲಿರುವ ಬಸವ ಮಂಟಪದ ವಿಳಾಸ:

ಬಸವ ಮಂಟಪ, ಮಾತಾ ಆಶ್ರಮ

ಮನೆ ನಂ.H3/82, ಬೆಂಗಾಲಿ ಕಾಲಿನಿ. (ಸುಲಭ್ ಇಂಟರ್‌ನ್ಯಾಷನಲ್ ಆಫೀಸ್ ಸಮೀಪ)

(ಪಾಲಮ್ ಗ್ರಾಮ) ಮಹಾವೀರ ಎನ್‌ಕ್ಲೇವ್, ನವದೆಹಲಿ – 110045

ಸ್ಥಿರ ದೂರವಾಣಿ ಸಂಖ್ಯೆ : 011-64563860

ಮೊಬೈಲ್ : ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದರು – 09212627150

ಪೂಜ್ಯ ಶ್ರೀ ಸರ್ವಮಂಗಳಾ ಮಾತಾ – 09538095592

ಶರಣೆ. ಮುಕ್ತಾಯಕ್ಕ – 09990385640

ಲಿಂಗಾಯತ ಮಹಾರ್‍ಯಾಲಿ - ದಿನಾಂಕ ಬದಲಾವಣೆ

ಶರಣ ಬಂಧುಗಳೇ,

ದೆಹಲಿಯ ಲಿಂಗಾಯತ್ ರ್‍ಯಾಲಿ ಮಾಡುವ ಕುರಿತು ಶರಣ ಮೇಳದಲ್ಲಿ ಘೋಷಿಸಿ ಫೆಬ್ರವರಿ 23, 24 ಎಂದು ತಿಳಿಸಲಾಗಿತ್ತು. ಆಗಿನ್ನೂ ಲೋಕಸಭಾ ಅಧಿವೇಶನದ ದಿನಾಂಕಗಳು ಘೋಷಣೆಯಾಗಿರಲಿಲ್ಲ. ಈ ದಿನಾಂಕಗಳಲ್ಲಿ ಅಧಿವೇಶನ ನಡೆಯಬಹುದೆಂದು ಅಂದಾಜಿಸಲಾಗಿದ್ದಿತ್ತು. ನಂತರ ಲೋಕಸಭಾ ಅಧಿವೇಶನ ಫೆಬ್ರವರಿ 5 ರಿಂದ 21ರವರೆಗೆ ಎಂದು ಪ್ರಕಟವಾಯಿತು. ಲೋಕಸಭಾ ಅಧಿವೇಶನ ನಡೆಯುವಾಗಲೇ ರ್‍ಯಾಲಿ ಮಾಡಬೇಕೆಂದು ದಿನಾಂಕಗಳನ್ನು ಹಿಂದೂಡಿ, ಫೆಬ್ರವರಿ 17, 18ರಂದು ಎಂದು ನಿರ್ಧರಿಸಲಾಗಿದೆ. ಹೀಗಾಗಿ ರೇಲ್ವೆ ರಿಸರ್ವೇಷನ್ನಗೆ ಬಹಳ ಅನಾನುಕೂಲವಾಗಿರಬಹುದು. ದಿನಾಂಕ ಬದಲಾವಣೆ ಅನಿವಾರ್ಯವಾಗಿದೆ. ಸಹಕರಿಸಿರಿ.

ನೀವು ಹೊರಡುವ ಊರುಗಳಿಂದ ರಿಸರ್ವೇಷನ್ ಸಿಕ್ಕಿರಬಹುದು. ನಂತರ ಬರುವ ಸ್ಟೇಷನ್‌ಗಳ ಕೋಟಾದಲ್ಲಿ ಪ್ರಯತ್ನಿಸಿರಿ. ಲೇಡಿಸ್ ಕಂಪಾರ್ಟ್‌ಮೆಂಟ್, ಜನರಲ್ ಕಂಪಾರ್ಟ್‌ಮೆಂಟದಲ್ಲಿ ಬರಬಹುದು. ಒಂದು ದಿನ ಮೊದಲೇ ಹೊರಡಲೂಬಹುದು. ಎಲ್ಲರೂ ಹೊರಡುವ ದಿವಸ ರಿಸರ್ವೇಷನ್ ಸಿಕ್ಕದಿದ್ದರೆ ಹಿಂದಿನ ದಿನಕ್ಕೆ ಪ್ರಯತ್ನಿಸಬಹುದು.

ವಿಶೇಷ ಸೂಚನೆ: ದೆಹಲಿಯಲ್ಲಿ ಚಳಿ ಬಹಳವಿದೆ. ಆದ್ದರಿಂದ ಹಾಸಿಕೊಳ್ಳಲು-ಹೊದ್ದುಕೊಳ್ಳಲು ಸ್ವೆಟರ್ ಮುಂತಾದ ವಸ್ತುಗಳನ್ನು ಜೊತೆಗೆ ತನ್ನಿರಿ.

ಬೆಂಗಳೂರಿನಿಂದ ಚಂಡೀಗಡ ಎಕ್ಸ್‌ಪ್ರೆಸ್ ವಯಾ ದೆಹಲಿ ಹೋಗುತ್ತಿದ್ದು, ಹೊಸದಾಗಿ ಶುರುವಾಗಿರುವ ಕಾರಣ ವಾರಕ್ಕೆ ಎರಡು ದಿನ ಹೋಗುವ (ಬುಧುವಾರ ಮತ್ತು ಶನಿವಾರ) ಇದರಲ್ಲಿ ಸಿಕ್ಕುವ ಅವಕಾಶವಿರುತ್ತದೆ. ಆಸಕ್ತರು ಪ್ರಯತ್ನಿಸಿರಿ.

ರಿಸರ್ವೇಷನ್‌ಗೆ ಸಂಪರ್ಕಿಸುವ ವ್ಯಕ್ತಿ : ಶರಣ ಇಂದುಶೇಖರ್
ಬಸವ ಮಂಟಪ, ಬೆಂಗಳೂರು
ಮೊಬೈಲ್ : 9945684230

ವಚನ ಕಿರಣ

ಹಣೆಯ ಮೇಲೆ ತ್ರಿಪುಂಡ್ರವ ಧರಿಸಿ
ಕೊರಳಲ್ಲಿ ರುದ್ರಾಕ್ಷಿ ಮಾಲೆ ಹಾಕಿ
ಅಂಗದ ಮೇಲೆ ಲಿಂಗವ ಧರಿಸಿ
ನಾನು ವೀರಶೈವ ಲಿಂಗಾಯತ ಎಂದು
ಹೇಳುವ ಮೂಢರ ಕಂಡು ನಗುವ
ನಮ್ಮ ಲೀಲಾವಿಶೇಷ ಲಿಂಗದೇವಾ

ಬಲ್ಲವರೆ ಬಲ್ಲರು
ಎಲ್ಲರರಿಯರು
ಬಸವಾತ್ಮಜೆಯ ಶಕ್ತಿಯ
ಲೀಲಾವಿಶೇಷ ಲಿಂಗದೇವಾ

-ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ
ಬಸವ ಮಂಟಪ, ಬೆಂಗಳೂರು

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666





ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2014ರ

ಮಾರ್ಚ್ 31, ಏಪ್ರಿಲ್ 01 ಮತ್ತು 02 ರಂದು

ಒಂಭತ್ತನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ-ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸ್ಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಆಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲ ಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆ ಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆ ಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯುವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್,ನೀರಿನ ತೊಟ್ಟಿ, ಕಾರ್ಯಾಲಯ (Office)ಮತ್ತು ವಾಸಕ್ಕೆ 3 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಈ ಸದ್ಯ ಪ್ರತಿ ಅಮವಾಸ್ಯೆಯಂದು ಶರಣ ಸಂಗಮ -ಪ್ರಾರ್ಥನೆ ಮತ್ತು ಅನುಭವ ಗೋಷ್ಠಿಯನ್ನು ನಡೆಸಲಾಗುತ್ತಿದ್ದು ಸುತ್ತಲಿನ ಪ್ರದೇಶದಿಂದ ಶರಣ ಬಂಧುಗಳು ಅಲ್ಲಮ ಗಿರಿಗೆ ಬರುತ್ತಾರೆ. ಮುಂದೆ ವಿಸ್ತಾರವಾದ ಕಾರ್ಯ. ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಲಿಂಗ ಸ್ವಾಮಿಗಳವರಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು ಹೊಂದು ವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.31-3-2014 ಬೆಳಿಗ್ಗೆ 10.30ಕ್ಕೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ),ಅಲ್ಲಮಪ್ರಭು ತೊಟ್ಟಿಲು ಕಾರ್ಯಕ್ರಮ ಶನಿವಾರ ದಿ.01-4-14ರಂದು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ - ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ನಂತರ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳವರಿಂದ ಭಾನುವಾರ ದಿ.02-4- 2014 ರಂದು ಬೆಳಿಗ್ಗೆ 10-30 ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು: ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ ಅಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟ ಇದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಅಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಪ್ಯಾಸೆಂಜರ್ ಟ್ರೇನ್, ಹರಿಪ್ರಿಯ

ಎಕ್ಸ್‌ಪ್ರೆಸ್ ಹಾತ್‌ಕಣಂಗಲೆಯಲ್ಲಿ ನಿಲುತ್ತವೆ. ಹಾತ್‌ಕಣಂಗಲೇ ಬಸ್‌ಸ್ಟ್ಯಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ರಾಮಲಿಂಗಕ್ಕೆ ಹೋಗುವ ರಸ್ತೆಯಲ್ಲಿ ಅಲ್ಲಮಗಿರಿಗೆ ಬರಬಹುದಾಗಿರುತ್ತದೆ. ವಾಹನಗಳ ವ್ಯವಸ್ಥೆ ಇರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 22ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 23ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

ಮಾರ್ಚ್ 31, ಏಪ್ರಿಲ್ 01 ಮತ್ತು 02 ರಂದು ನಡೆಯುವ ಒಂಭತ್ತನೆಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಉಪಾಹಾರದ ವೆಚ್ಚ ಭರಿಸುವವರು	: 15000	(ಹದಿನೈದು ಸಾವಿರ) ರೂಗಳು.
ಮಹಾಪೋಷಕರು	: 10000	ರೂ ಮತ್ತು ಮೇಲೆ ಕೊಟ್ಟವರು
ಪೋಷಕರು	: 5000	ರೂ ಮತ್ತು ಮೇಲೆ ಕೊಟ್ಟವರು
ಹಿತೈಷಿಗಳು	: 500	ರೂ
ಉತ್ಸವ ಸಮಿತಿ ಸದಸ್ಯರು	: 250	ರೂ
ದಾನಿಗಳು	: 1000	ರೂ ಮತ್ತು ಮೇಲೆ ಕೊಟ್ಟವರು
ಪ್ರತಿನಿಧಿ ಶುಲ್ಕ	: 150	ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್‌ಟ್ರಸ್ಟ್. ಎಂದಾದರೂ ಬರೆಸಬಹುದು.

ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಸಂಪರ್ಕಿಸಬೇಕಾದ ವಿಳಾಸ

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ -ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ : (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/22923736

ಗಣ ಮೇಳದಲ್ಲಿ ಸಂದೇಶ ವಾಚನ

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ

(ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಿಂದ ಅಥವಾ ಸರಿಯಾಗಿ ಓದಬಹುದಾದ ಆಹ್ವಾನಿತ ಅತಿಥಿಗಳಿಂದ)

॥ಓಂ ಶ್ರೀ ಗುರು ಬಸವ ಲಿಂಗಾಯ ನಮಃ॥

ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ, ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ಈ ಪವಿತ್ರ ಶರಣ ಗಣಮೇಳದಲ್ಲಿ ಸಮಾವೇಶವಾಗಿರುವ ಎಲ್ಲ ಶರಣ ಬಂಧುಗಳಿಗೂ ಶರಣು ಶರಣಾರ್ಥಿಗಳು.

ಇಂದು ನಡೆಯುತ್ತಲಿರುವ ಶರಣ 'ಗಣ ಮೇಳ' ವು ಅತ್ಯಂತ ಪವಿತ್ರವಾದ ಗಣ ಸಮಾವೇಶ. ಧರ್ಮಪಿತರ ಕಾಲದಲ್ಲಿ ಹಲವಾರು ಗಣಪರ್ವಗಳು, ಗಣ ಸಭೆಗಳು ನಡೆದು, ಸಂಸ್ಕಾರ ಮತ್ತು ಸಂಘಟನೆ ಎರಡನ್ನೂ ಸಾಧಿಸಿದವು. ಹರಿಹರ ಮಹಾಕವಿ ಬಣ್ಣಿಸುವಂತೆ ಧರ್ಮಪಿತರು 'ಪಾಷಂಡಿ ಭೂಮಿಯೊಳು ಭಕ್ತಿಯನ್ನು ಬಿತ್ತಿ ಬೆಳೆದು ಗಣಪರ್ವಗಳನ್ನು ಸಫಲಂ ಮಾಡಿ, ಭಕ್ತಿಯ ಬಣ್ಣವೇರಿಸಿದ ಕಾರಣಿಕರಾದರು.' ಕಲ್ಯಾಣ ಪಟ್ಟಣದಲ್ಲಿ ಸಾಕಷ್ಟು ಗಣಪರ್ವಗಳನ್ನು ಸಂಯೋಜಿಸಿದರು.

'ಗಣ' ಎಂದರೇನು? ಗಣ ಎಂದರೆ ಸಮೂಹ, ಸಮಾಜ, ಧರ್ಮಪಿತ ಬಸವಣ್ಣನವರು 'ಗಣ ಧರ್ಮ 'ಎಂಬುದನ್ನು ಸ್ಥಾಪಿಸಿದರು. ಕುಟುಂಬ, ಜಾತಿ, ಕುಲ, ವರ್ಣಗಳ ಸೀಮೆ ದಾಟಿದ ಗಣ ಧರ್ಮದ ಪರಿಕಲ್ಪನೆ ಕೊಟ್ಟರು. ಈ ಗಣ ಧರ್ಮದ ಸದಸ್ಯರನ್ನು ಬಂಧಿಸುವ ಸೂತ್ರ ಜಾತಿಕುಲವಲ್ಲ, ವರ್ಣ-ವರ್ಗವಲ್ಲ 'ದೇವರ ಕುರುಹು' ಎಂಬುದನ್ನು ಸಾರಿದರು. ದೇವಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಭಕ್ತರಲ್ಲಿ ಕುಲವನ್ನು ಅರಸುವುದಿಲ್ಲ ಎಂದು ಘೋಷಿಸಿ ತಾತ್ತ್ವಿಕ ಗಣಧರ್ಮದ ಸೂತ್ರವನ್ನು ಬೋಧಿಸಿದರು. ಈ ತಾತ್ತ್ವಿಕ ಗಣಧರ್ಮದ ಸದಸ್ಯತ್ವ ಪಡೆದವರು ಸಹಬಾಳ್ವೆ ಮಾಡುವ ಹಿರಿಯ ಗುಣ ಹೊಂದಬೇಕೆಂದು ಸಾರಿ ಹೇಳಿದರು.

ಕಾಗೆ ಒಂದಗುಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವನು ?
ಕೋಳಿ ಒಂದು ಕುಟುಕ ಕಂಡರೆ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಲಿಂಗದೇವಾ.

ಕಾಗೆಯಂತಹ ಪಕ್ಷಿ ಅನ್ನದ ಅಗುಳನ್ನು ಕಾಣುತ್ತಲೇ 'ಕಾ ಕಾ' ಎಂದು ಕರೆದು ತನ್ನ ಬಳಗವನ್ನು ಸೇರಿಸಿ ಕೊಂಡು ತಿನ್ನುತ್ತದೆ. ಕೋಳಿಯು ಕಾಳುಗಳನ್ನು ಕಾಣುತ್ತಲೇ 'ಕೊ ಕ್ಕೊ' ಎಂದು ಕರೆದು ಹಂಚಿಕೊಂಡು ತಿನ್ನುತ್ತದೆ. ಭಕ್ತಿವಂತನಾಗಿ ಒಬ್ಬ ವ್ಯಕ್ತಿಯು ಇಂತಹ ಸಮುದಾಯ ಜೀವನವನ್ನು ನಡೆಸದಿದ್ದರೆ ಹೇಗೆ? ಆದ್ದರಿಂದ ಭಕ್ತಿಜೀವಿಯಾದವನು ಭಕ್ತಿಪಕ್ಷವನ್ನು ಕಟ್ಟಿಕೊಂಡು, ಸಹಬಾಳ್ವೆ ನಡೆಸಬೇಕು.

ಕರ್ಮವೆಂಬ ಅಂಕದೊಡನೆ ತೊಡರಿದೆ
ಬಿನ್ನಪವ ಅವಧಾರು; ನಿಮ್ಮಾಳಿನ ಭಾಷೆಯ

ಕಡೆಗಳಕ್ಕೆ ನೂಂಕುವೆ ಕೆಡಹುವೆನಂಕವ
ಕರೆದೊಡೋ ಎನಿಸಿದಡೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ

ಕರ್ಮ, ಭವ ಎಂಬುದೇ ಶತ್ರು. ಈ ಭವವೆಂಬ ಶತ್ರುವಿನೊಡನೆ ಭಕ್ತನು ಹೋರಾಟಕ್ಕೆ ನಿಲ್ಲುತ್ತಾನೆ. ಈ ಶತ್ರುವನ್ನು ಗೆಲ್ಲಬೇಕಾದರೆ ಎರಡು ಸಾಧನಗಳಿವೆ. ಒಂದು ಪರಮಾತ್ಮನಿಗೆ ಶರಣಾಗುವುದು; ಇನ್ನೊಂದು ಶರಣರ ಸಂಗದಲ್ಲಿ ಒಡನಾಡುವುದು. 'ಗಣ ಮೇಳಾಪ' -ಶರಣ ಸಂಗದಲ್ಲಿ ಸೇರಿ ದೈವೀಚಿಂತನೆ ಮಾಡುವುದೇ ಅತ್ಯಂತ ಪ್ರಬಲ ಶಸ್ತ್ರ

ಧರ್ಮಗುರುವಿನ ಆದೇಶದಂತೆ ನಾವು ನೀವುಗಳೆಲ್ಲ ಗಣಮೇಳದಲ್ಲಿ ಭಾಗಿಗಳಾಗಿ ಇಲ್ಲಿ ಒಟ್ಟುಗೂಡಿದ್ದೇವೆ. ಈ ಗಣ ಮೇಳವು ಸಮಾನತೆ, ಧಾರ್ಮಿಕ ಸಹೋದರತ್ವ-ಸಹ ಬಾಳ್ವೆಗಳ ಸಂಕೇತವುಳ್ಳ ಕಾರ್ಯಕ್ರಮವಾಗಿದೆ. ಸೃಷ್ಟಿಕರ್ತನಿಗೆ ಮತ್ತು ಧರ್ಮ ಗುರುವಿಗೆ ಕೃತಜ್ಞತೆಯನ್ನು ಸಮರ್ಪಿಸುವ ಶ್ರೇಷ್ಠ ಕ್ರಿಯೆಯಾಗಿದೆ.

ಬಸವ ಗುರುವಿಗೆ ಶರಣಾಗಿದ್ದೇನೆ.
ಜಗತ್ ಕರ್ತನಿಗೆ ಶರಣಾಗಿದ್ದೇನೆ
ಶರಣ ಗಣಕ್ಕೆ ಶರಣಾಗಿದ್ದೇನೆ.

ಎಂಬ ತ್ರಿತತ್ತ್ವದ ಪ್ರತೀಕವಾಗಿದೆ. ಸೃಷ್ಟಿಕರ್ತ ಮತ್ತು ಧರ್ಮಕರ್ತರನ್ನು ಕೃತಜ್ಞತೆಯಿಂದ ಸ್ತುತಿಸಲು ನಾವಿಲ್ಲಿ ಸೇರಿದ್ದೇವೆ.

ಸರ್ವ ಶರಣರ ದಿನಾಚರಣೆ

ಒಂದು ತತ್ತ್ವಜ್ಞಾನವಾಗಲೀ, ಧರ್ಮವಾಗಲೀ ಜೀವಂತವಾಗಿರಬೇಕಾದರೆ ಅದು ಪರಂಪರೆಯಾಗಿ (heritage) ಸಾಗಿಬರಬೇಕು. ಶ್ರೀ ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಆರಂಭವಾದ ಲಿಂಗಾಯತ ಧರ್ಮದ ಪರಂಪರೆಯು ಶೂನ್ಯ ಪೀಠಾಧೀಶ ಅಲ್ಲಮಪ್ರಭು, ಚಿನ್ಮಯಜ್ಞಾನಿ ಚೆನ್ನಬಸವಣ್ಣ, ಬಸವಯೋಗಿ ಸಿದ್ಧರಾಮೇಶ್ವರ, ವೀರವಿರಾಗಿಣಿ ಅಕ್ಕಮಹಾದೇವಿ, ವೀರಶರಣ ಮಡಿವಾಳ ಮಾಚಿದೇವ, ವೀರ ಮಾತೆ ಅಕ್ಕನಾಗಲಾಂಬಿಕೆ ಎಂಬ ಸಪ್ತ ಗಣಾಧೀಶರನ್ನೊಡಗೂಡಿ ಅವ್ಯಾಹತವಾಗಿ ಸಾಗಿ ಬಂದಿದೆ. ಗುರು ಬಸವಣ್ಣನವರ ಕಾಲದ ಆದಿ ಪ್ರಮಥರಿಂದ ಈವರೆಗೆ ಆಗಿ ಹೋಗಿರುವ ಲಿಂಗಾಂಗಯೋಗಿಗಳು, ಶರಣರು ಅಸಂಖ್ಯಾತರು. ಅವರ ಜಯಂತಿ -ಲಿಂಗೈಕ್ಯ ದಿನ ಆಚರಿಸಲು ವರ್ಷದ 365 ದಿನಗಳು ಸಾಕಾಗವು. ಅಂಥ ಸಮೃದ್ಧ ಪರಂಪರೆಯ ವಾರಸುದಾರರು ನಾವು. ಆದ್ದರಿಂದ ಜಗತ್ತಿನ ಮೊಟ್ಟಮೊದಲ ಯೋಗಿಯೂ, ಓಂಕಾರದ ದ್ರಷ್ಟಾರನೂ, ಭಾರತೀಯ ಧಾರ್ಮಿಕ ಪರಂಪರೆಯ ಮೂಲಿಗನಾದ ವೇದಪೂರ್ವ ಪ್ರವಾದಿ "ಯೋಗಿರಾಜ ಶಿವ"ನ ತಪಸ್ಸಿನ ದಿನವಾದ "ಶಿವರಾತ್ರಿಯಂದು" ಸರ್ವ ಶರಣರ ಸಂಸ್ಮರಣೆಯನ್ನು ಒಟ್ಟಾಗಿ ಮಾಡೋಣ.

ಬಸವ ಧರ್ಮ ಸಾರ

ಇಂದು ನಾವು ಸಾರರೂಪದಲ್ಲಿ ಮಂತ್ರಪುರುಷ ಬಸವಣ್ಣನವರು ಸಂಸ್ಥಾಪಿಸಿ ಕೊಟ್ಟ ಲಿಂಗಾಯತ ಧರ್ಮದ ಸ್ವರೂಪವನ್ನು ಮನನ ಮಾಡೋಣ. ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಕ್ರಿ.ಶ. 1134ರಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಜನಿಸಿದರು.

ಶೈವ ಬ್ರಾಹ್ಮಣರಾದ ಮಾದಿರಾಜ-ಮಾದಲಾಂಬಿಕೆಯರ ಗರ್ಭದಲ್ಲಿ ಪೂಜಾಫಲದಿಂದ ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯದಂದು ಜನಿಸಿದರು. ವೈದಿಕ ಧರ್ಮದಲ್ಲಿ ಹುಟ್ಟಿದ ಅವರು ಬಹುದೇವತೋಪಾಸನೆ, ಮೂಢನಂಬಿಕೆ, ವರ್ಣವ್ಯವಸ್ಥೆ, ಜಾತಿಪದ್ಧತಿ ಇವುಗಳ ಪ್ರತಿಫಲವಾದ ಅಸ್ಪೃಶ್ಯತೆ, ಯಜ್ಞ-ಯಾಗಾದಿಗಳ ಹಿಂಸೆ, ಕ್ರೂರದೇವತೆಗಳಿಗೆ ಕೊಡುವ ಪ್ರಾಣಬಲಿ, ಪೂಜಾದಿಗಳಲ್ಲಿದ್ದ ಆಡಂಬರ, ಭೇದಭಾವಗಳನ್ನು ಬಿತ್ತಿ ಬೆಳೆದ ದೇವಾಲಯಗಳ ಸಂಕುಚಿತತೆ, ದೇವ-ಭಕ್ತರ ನಡುವೆ ಇವು ಬೆಳೆಸಿದ ಕಂದರ, ಸ್ತ್ರೀ ಶೋಷಣೆ ಮುಂತಾದವುಗಳನ್ನು ಕಂಡು ಬೇಸತ್ತು, ನೊಂದು ತಾಯಿ-ತಂದೆ, ಸಂಪ್ರದಾಯದ ಬಂಧನದಿಂದ ಆಚೆ ನಡೆದರು. ಕೂಡಲ ಸಂಗಮದ ಗುರುಕುಲದಲ್ಲಿ ಆಶ್ರಯ ಪಡೆದು, ವಿದ್ಯಾಭ್ಯಾಸ ಕೈಗೊಂಡು, ಸಂಗಮೇಶ್ವರನ ಅರ್ಚಕರಾಗಿ ಕೆಲಸ ಮಾಡತೊಡಗಿದರು. ಒಂದು ದಿನ ಪರಮಾತ್ಮನನ್ನು ಪೂಜಿಸುವ ಇಷ್ಟಲಿಂಗದ ಕಲ್ಪನೆ ಹೊಂದಿದರು. ಈ ಇಷ್ಟಲಿಂಗವೇ ಕೇಂದ್ರವಾದ ಹೊಸ ಧರ್ಮದ ರೂಪುರೇಷೆ ಮೂಡಿಸಿಕೊಂಡು ಬಸವರಸ -ಸಂಗನ ಬಸವಣ್ಣನಾಗಿ ಕಲ್ಯಾಣಕ್ಕೆ ಮುನ್ನಡೆದರು . ರಾಜಕೀಯದಲ್ಲಿ ವಿವಿಧ ಹುದ್ದೆ ಹೊಂದಿ , ಪ್ರಧಾನಿಯೂ ಆದರು. ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಅಭೂತಪೂರ್ವ ಸಂಸ್ಥೆ ಕಟ್ಟಿದರು .ಭಾರತದ ವಿವಿಧ ದಿಕ್ಕುಗಳಿಂದ ಜನರು ಆಗಮಿಸಿದರು. ಅನುಭವ ಮಂಟಪದ ಶರಣರು ವಚನ ಸಾಹಿತ್ಯ ಎಂಬ ಶ್ರೇಷ್ಠ ಕೊಡುಗೆ ಕೊಟ್ಟರು. ತಮ್ಮ ಅನುಯಾಯಿಗಳಾಗಿದ್ದ ಇಬ್ಬರು ಶರಣರ ಮಕ್ಕಳ ಮಧ್ಯೆ ಬಸವಣ್ಣನವರು ವಿವಾಹಕ್ಕೆ ಪ್ರೋತ್ಸಾಹ ನೀಡಿದರು.ಆ ಶರಣರಲ್ಲಿ ಒಬ್ಬರು ಪೂರ್ವಾಶ್ರಮದಲ್ಲಿ ಹುಟ್ಟನಿಂದ ಅಸ್ಪೃಶ್ಯರು, ಮತ್ತೊಬ್ಬರು ಬ್ರಾಹ್ಮಣರು ಇದ್ದುದು ಜಾತಿವಾದಿಗಳ ಅಸಹನೆಗೆ ಕಾರಣವಾಗಿ, ಬಸವಣ್ಣನವರು ಪ್ರಧಾನಿ ಪಟ್ಟಕ್ಕೆ ರಾಜೀನಾಮೆ ಕೊಡಬೇಕಾಯಿತು. ಧರ್ಮಪಿತರು ಗಡಿಪಾರು ಶಿಕ್ಷೆ ಹೊಂದಿದರು . ಅವರ ನಿರ್ಗಮನದ ನಂತರ ವಿವಾಹದಲ್ಲಿ ಭಾಗಿಗಳಾದ ಶರಣರ ವಧೆ ಆಯಿತು.ಗಡಿಪಾರು ಹೊಂದಿ ಕೂಡಲ ಸಂಗಮಕ್ಕೆ ಬಂದು ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ದ ಪಂಚಮಿ ದಿನ ಕ್ರಿ.ಶ. 1196ರಲ್ಲಿ ಲಿಂಗೈಕ್ಯರಾದರು.

ನಮ್ಮ ಧಾರ್ಮಿಕ ಸಂಹಿತೆಯಾದ ವಚನ ಸಾಹಿತ್ಯದ ಮೂಲಕ ಆದಿ ಗುರು ಬಸವಣ್ಣನವರು ನಮಗೆ ವಿಶೇಷ ಶರಣ ಪಥವನ್ನು ನೀಡಿದ್ದಾರೆ. ಅವರು ಬೋಧಿಸಿದ ತತ್ತ್ವದ ಸಾರ ಹೀಗಿದೆ.

ತತ್ತ್ವಗಳು ಷಡಾಚಾರಗಳು

1. ವಿಶ್ವಗುರು ಬಸವಣ್ಣನವರು ಸೃಷ್ಟಿಕರ್ತನು ಕಳಿಸಿದ ಪ್ರತಿನಿಧಿ, ದೇವರ ಕರುಣೆಯ ಕಂದ (ಬಸವಾಚಾರ)
2. ದೇವನು ಒಬ್ಬ; ಲಿಂಗದೇವನನ್ನು ಇಷ್ಟಲಿಂಗರೂಪದಲ್ಲಿ ಪೂಜಿಸಬೇಕು. (ಲಿಂಗಾಚಾರ);
3. ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ದಾಸೋಹ ಭಾವದಿಂದ ಸಮಾಜಕ್ಕೆ ವಿನಿಯೋಗಿಸಬೇಕು (ಸದಾಚಾರ)
4. ಮಾನವರೆಲ್ಲರೂ ಸಮಾನರು. ನೀತಿ-ಸಂಸ್ಕಾರದಿಂದ ಶ್ರೇಷ್ಠರಾಗುವರು (ಶಿವಾಚಾರ)
5. ಅನ್ಯಾಯವನ್ನು-ಅಸತ್ಯವನ್ನು ಆತ್ಮಸ್ಥೈರ್ಯದಿಂದ ಎದುರಿಸಬೇಕು (ಗಣಾಚಾರ)
6. ವ್ಯಕ್ತಿಗಿಂತಲೂ ಸಮಾಜ-ಸಮಷ್ಟಿ ದೊಡ್ಡದೆಂದು ಭಾವಿಸಿ ವ್ಯಕ್ತಿಯು ಸಮಾಜದ ಸೇವೆ ಮಾಡಬೇಕು. (ಭೃತ್ಯಾಚಾರ)

ದರ್ಶನ ಶಾಸ್ತ್ರ : ಷಟಸ್ಥಲ - ಮಾನವ ಜೀವನದ ಗುರಿಯೇ ತಾನು ಹೊರಟ ಮೂಲ

ನೆಲೆ-ಲಿಂಗದೇವನಲ್ಲಿ ಒಡವೆರೆದು ಒಂದಾಗುವುದು, ಅಂಗ ಲಿಂಗದೊಡನೆ ಒಂದಾಗಬೇಕಾದರೆ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲ (stages) ಗಳನ್ನು ಅಳವಡಿಸಿಕೊಳ್ಳಬೇಕು.

ಆಚರಣೆ : ಅರ್ಚನೆ-ಅರ್ಪಣೆ-ಅನುಭಾವ. ದಿನನಿತ್ಯವೂ ಸೃಷ್ಟಿಕರ್ತನನ್ನು ಪೂಜಿಸುವುದು ! ಕಾಯಕ ಮಾಡಿ ಊಟ ಮಾಡುವುದು; ಶರಣರ ಸಂಗದಲ್ಲಿ ಒಡನಾಡುವುದು.

ಲಾಂಛನಗಳು : ಭಕ್ತಿಯ ಅಭಿವ್ಯಕ್ತಿಗೆ ಅಷ್ಟಾವರಣಗಳಾದ ಗುರು-ಲಿಂಗ-ಜಂಗಮ-ವಿಭೂತಿ-ರುದ್ರಾಕ್ಷಿ-ಮಂತ್ರ, ಕರುಣೋದಕ-ಕರುಣ ಪ್ರಸಾದ ಅಳವಡಿಸಿಕೊಳ್ಳುವುದು.

ಸಪ್ತನೀತಿ ಸೂತ್ರ : ಕಳವು ಮಾಡದಿರುವುದು, ಕೊಲ್ಲದಿರುವುದು (ಅಹಿಂಸೆ), ಸುಳ್ಳು ಹೇಳದಿರುವುದು, ಕೋಪಗೊಳ್ಳದೆ ಸಮಾಧಾನ ಚಿತ್ತದಿಂದಿರುವುದು, ತನಗಿಂತ ಕೀಳಾದವರನ್ನು ತಿರಸ್ಕಾರದಿಂದ ಕಾಣದಿರುವುದು, ಆತ್ಮಸ್ತುತಿ ಮಾಡದಿರುವುದು, ಪರನಿಂದೆ ಮಾಡದಿರುವುದು, ಅಂತರಂಗ ಶುದ್ಧಿ ಸಂಪಾದಿಸುವುದು, ಬಹಿರಂಗ ಶುದ್ಧಿ ಸಾಧಿಸುವುದು, ತನ್ಮೂಲಕ ದೇವನ ಕೃಪೆ ಪಡೆಯುವುದು.

ಜಗತ್ತಿನ ಅನೇಕ ಪ್ರವಾದಿಗಳು ಸುವ್ಯವಸ್ಥಿತ ರೂಪದಲ್ಲಿ ಧರ್ಮವನ್ನು ಕೊಡದೆ ಕೇವಲ ವಚನ ಸಂದೇಶ ಕೊಟ್ಟು ಹೋಗಿದ್ದರೂ ಕಾಲಾನಂತರದಲ್ಲಿ ಅವರ ಅನುಯಾಯಿಗಳು ಅತ್ಯಂತ ಸುಂದರವಾಗಿ ಸಂಘಟಿಸಿಕೊಂಡಿದ್ದಾರೆ. ತಮ್ಮ ಸ್ಥಾಪಕರು ಕೊಟ್ಟುದಕ್ಕಿಂತ ಚೆನ್ನಾಗಿ ಸರ್ವಾಂಗ ಸುಂದರವಾಗಿ ಬೆಳೆಸಿಕೊಂಡಿದ್ದಾರೆ. ನಮ್ಮಲ್ಲಿ ದುರ್ದೈವದ ಸಂಗತಿ ಎಂದರೆ ಧರ್ಮಗುರು ಬಸವಣ್ಣನವರು ಸುಸಂಬದ್ಧವಾಗಿ ಕೊಟ್ಟುದನ್ನು ಬೆಳೆಸಿಕೊಳ್ಳುವ ಬದಲಿಗೆ ಅಂದಗೆಡಿಸಿರುವುದನ್ನು ಕಾಣಬಹುದು. ತಪ್ಪನ್ನು ಈಗಲಾದರೂ ಆತ್ಮಾವಲೋಕನ ಮಾಡಿಕೊಂಡು ತಿದ್ದಿಕೊಳ್ಳುವುದು ಅತ್ಯಗತ್ಯವಾಗಿದೆ.

ಧರ್ಮದ ಗುರಿ ಒಟ್ಟುಗೂಡಿಸುವುದು - ಒಡೆಯುವುದಿಲ್ಲ

ವಿಶ್ವಗುರು ಬಸವಣ್ಣನವರು ವಿಶ್ವ ಕುಟುಂಬತ್ವದ ಬೋಧೆ ನೀಡಿದ್ದಾರೆ.

ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ
ಇವನಮ್ಮವ ಇವನಮ್ಮವ ಇವನಮ್ಮವ ಎಂದೆನಿಸಯ್ಯ
ಲಿಂಗದೇವಾ, ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ

ಇವನಾರು ? ಎಂದು ಪ್ರಶ್ನಿಸಿ ಜಾತಿ, ಉದ್ಯೋಗ, ಅಂತಸ್ತು ಹಿಡಿದು ಯಾರನ್ನೂ ತಿರಸ್ಕರಿಸದೆ ಎಲ್ಲರನ್ನೂ ನಮ್ಮವರು ಎಂದು ಆದರಿಸಬೇಕು. ಆಗ ಮಾತ್ರ ನಾವು ನಿಜವಾದ ದೇವಭಕ್ತರು, ದೇವರ ಮಕ್ಕಳು ಆಗಲು ಸಾಧ್ಯ.

ಇಂದು ಜಗತ್ತಿನಲ್ಲಿ, ಭಾರತ ಭೂಮಿಯಲ್ಲಿ ಧರ್ಮವು ಪರಸ್ಪರರನ್ನು ಒಡೆಯುವ ವಿಕೃತರೂಪ ಹೊಂದಿದೆ. ಕಾರಣವೇನೆಂದರೆ ಧರ್ಮವು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಮತಾಂಧತೆ, ಜಾತ್ಯಂಧತೆ ಆಗಿರುವುದು. ಬಸವ ಧರ್ಮೀಯರಾದ ನಾವು ಈ ಲೋಪವನ್ನು ಅರಿತುಕೊಂಡು ಧರ್ಮವನ್ನು ಒಡೆಯುವ ಸಾಧನವಾಗಿ ಮಾಡಿಕೊಳ್ಳದೆ ಬೆಸೆಯುವ ಸಾಧನವನ್ನಾಗಿ ಮಾಡಿಕೊಳ್ಳಬೇಕು. ಹೇಗೆ ಪೃಥ್ವಿ ತನ್ನ ಅಕ್ಷದ ಮೇಲೆ ತಿರುಗುತ್ತಲೇ ಸೂರ್ಯನ ಸುತ್ತಲೂ ತಿರುಗುವುದೋ ಹಾಗೆ ನಮ್ಮ ಧರ್ಮಾಚರಣೆಯನ್ನು ನಾವು ನಿಷ್ಠೆಯಿಂದ ಪಾಲಿಸುತ್ತ ದೇಶದ ಹಿತಾಸಕ್ತಿ ಕಾಪಾಡಬೇಕು. ವಿಶ್ವ ಕುಟುಂಬತ್ವದ ಸಂದೇಶ ಸಾರಬೇಕು. ಇಂಥದೊಂದು ಪವಿತ್ರ ಸಂಕಲ್ಪವನ್ನು ಗಣ ಮೇಳದ ಇಂದು ತೊಡೋಣ.

ಜಯ ಗುರು ಬಸವೇಶ ಹರಹರ ಮಹಾದೇವ.

ಅಕ್ಕನ ಯೋಗಾಂಗ ತ್ರಿವಿಧಿ – (ವಿಶ್ಲೇಷಣೆ)

– ಪೂಜ್ಯ ಶ್ರೀ ಜಗದ್ಗುರು
ಬಸವ ಕುಮಾರ ಸ್ವಾಮೀಜಿ

"ಜೀವ ಪರಮರ ಭೇದ ಭಾವವನರಿವೊಡೆ
ಆವಾವ ಮುಖದೊಳಿರುತಿಹುದೊ। ಎನ್ನನು
ಭಾವಕ್ಕೆ ಬಂದುದನೊರೆವೆನು ।

ಜೀವಾತ್ಮ ಅಲ್ಪಜ್ಞ, ಅಲ್ಪ ಕರ್ತೃತ್ವ ಅಲ್ಪಭಾವಪನ್ನ ಸಂಕುಚಿತನಾಗಿದ್ದಾನೆ. ಆದರೆ ಪರಮ ಶ್ರೇಷ್ಠನಾದ ದೇವನ ಸ್ವರೂಪ ಸರ್ವಜ್ಞ, ಸರ್ವಶಕ್ತ, ಅಧಿಕಭಾವಪನ್ನ ಎಲ್ಲಕಡೆಗೆ ಇರುವಂಥ ಈ ಭೇದ ಭಾವವನ್ನು ಅರಿತುಕೊಂಡರೆ ಇನ್ನೊಂದು ಅವರವರ ಭಾವಕ್ಕೆ ಅವರವರ ತೆರನಾಗಿ ಇರುತಿಹನು. ಆದರೆ ಎನ್ನ ಪರಿಶುದ್ಧವಾದ ಭಾವಕ್ಕೆ – ಮತಿಗೆ ಹೊಳೆದುದನ್ನು ತೋರಿಮುದನು ನಿಮಗೆಲ್ಲ ಅರುಹುವೆನೆಂದು ಹೇಳುತ್ತಿದ್ದಾರೆ ಜಗನ್ಮಾತಾ ಅಕ್ಕಮಹಾದೇವಿಯವರು.

"ಶರಣರ ನೆಲೆಗಳನ್ನು ಅರಿವಡೆ ಅಗಣಿತವು
ಹರಿಯಜಸುರರಿಗಳವಲ್ಲವೆಂದೆನಲು । ಒರೆದೆನು ಅವರ
ಕೃಪೆಯಿಂದ

"ಶರಣ" ಅನ್ನುವ ಪದ ಬಹಳ ಬೆಲೆಯುಳ್ಳ ಒಳ್ಳೆಯ ಗೌರವ ಘನತೆಯಿಂದ ಕೂಡಿದ ದೇವರಿಗೆ ಶರಣಾದ ಪದ. ಉಪಮಿಸಬಾರದ ಉಪಮಾತೀತನಾದ ಸ್ಥಿತಿಯುಳ್ಳದ್ದು. "ಕಾಮಿಸದೆ ಕೊಡದು ಕಾಮಧೇನು, ಕಲ್ಪಿಸದೆ ಕೊಡದು ಕಲ್ಪವೃಕ್ಷ. ಚಿಂತಿಸದೆ ಕೊಡದು ಚಿಂತಾಮಣಿ, ಭಾವಿಸದೆ ಕೊಡನಾ ಶಿವನು ಕಾಮಿಸದೆ ಕಲ್ಪಿಸದೆ ಚಿಂತಿಸದೆ ಭಾವಿಸದೆ ಕೊಡಬಲ್ಲರು ಕೂಡಲ ಸಂಗನ ಶರಣರು ಅಂತ ಚನ್ನಬಸವಣ್ಣನವರು ಹೇಳಿದಂತೆ ಶರಣರ ಸ್ಥಿತಿ ಇರುವು ತುಂಬಾ ಆಳವಾದದ್ದು. ಆದರೆ ಅವರ ಕೃಪೆಯನ್ನು ಪಡೆದುಕೊಂಡು ಅವರ ಹೃದಯವನ್ನು ಗೆದ್ದು ಹೇಗೆಂದರೆ ಅಕ್ಕಮಹಾದೇವಿ ಕಲ್ಯಾಣಕ್ಕೆ ಬಂದು ಕಿನ್ನರಿ ಬ್ರಹ್ಮಯ್ಯನಿಂದ ಕಠೋರವಾದ ಅಧ್ಯಾತ್ಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಏಳುನೂರಾ ಎಪ್ಪತ್ತು ಅಮರ ಗಣಂಗಳ ಗಣಾಧೀಶರಾದ ಗುರು ಬಸವಣ್ಣನವರು, ಚನ್ನಬಸವಣ್ಣನವರು, ಲಿಂಗಾಂಗಯೋಗಿ ಸಿದ್ಧರಾಮೇಶ್ವರ, ಮಡಿವಾಳ ಮಾಚಿದೇವರು, ಅಕ್ಕನಾಗಲಾಂಬಿಕೆ, ನೀಲಾಂಬಿಕೆಯಂಥ ದಿಗ್ಗಜರ ಮನಸ್ಸನ್ನು ಗೆದ್ದು ಅವರಿಗೆಲ್ಲಾ ಅಕ್ಕಾ ಎನ್ನಿಸಿಕೊಂಡಂಥವರು ಅಕ್ಕಮಹಾದೇವಿ. ಇಂಥವರ ಕರುಣೆಯನ್ನು ಕೃಪೆಯನ್ನು ಪಡೆದು ಕೊಂಡು ಹೇಳುತ್ತಿರುವೆನೆಂದು ಅರಹುತ್ತಿದ್ದಾರೆ ಮಹಾದೇವಿಯಕ್ಕನವರು.

ದೇವರ ದೇವ ವಲ್ಲಭನೆ ಗುರು ಚನ್ನ
ಮಲ್ಲಿಕಾರ್ಜುನನೆ ಮನದೊಳಗೆ । ಇರು ಕಂಡಾ
ಬಲ್ಲಂತೆ ನಿಮ್ಮ ಸುತ್ತಿಸುವೆನು

ಜಗತ್ತಿನಲ್ಲಿ ಸಾಕಷ್ಟು ಜನರಿಗೆ ನಿಜವಾದ ದೇವರ ಕಲ್ಪನೆ ಗೊತ್ತಿಲ್ಲಾ. ದೇವನನ್ನು ಪ್ರಾಣಿಗಳ, ಪಕ್ಷಿಗಳ, ಗಿಡ, ಮರ, ಮಾನವ ಆಕಾರದಲ್ಲಿ ಹಾಗೂ ವಿಚಿತ್ರವೆಂದರೆ ಮಂಗಳೂರು ಕಡೆ 1ನೆಯದ್ದು ಭೂತಾರಾದನೆ, 2ನೆಯದ್ದು ದೇವತಾ ಪೂಜೆ, 3ನೆಯದ್ದು ಭೂತಪೂಜೆ, 4ನೆಯದ್ದು ಪ್ರಾಣಿಪೂಜೆ, 5ನೆಯದ್ದು ಪಿತೃ ಪೂಜೆ, (ಹಿರಿಯರ ಪೂಜೆ),

6ನೆಯದ್ದು ಗುರು ಪೂಜೆ ಹಾಗೂ 7ನೆಯದ್ದು ದೇವಪೂಜೆ. ಅಕ್ಕಮಹಾದೇವಿಯವರು ಇಲ್ಲಿ ಹೇಳಿದ್ದು ನಿರಾಕಾರ, ನಿರಂಜನ ನಿರವಯವ ಪರಂಜ್ಯೋತಿ ಸ್ವರೂಪನಾದ ದೇವರ ದೇವನ ಕಲ್ಪನೆಯನ್ನು ಇಂಥ ಎಲ್ಲರಿಗೆ ಒಡೆಯ ಗುರು ಚನ್ನಮಲ್ಲಿಕಾರ್ಜುನನೆ ಎನ್ನ ಮನದೊಳಗೆ ಸದಾವಕಾಲ ಇರು ಎಂದು ಬೇಡಿಕೊಂಡು ಅವನ ಅಗಾಧವಾದ ಅಗಣಿತವಾದ ಮಹಿಮೆಯನ್ನು ಶಕ್ತಿಯನ್ನು ಸ್ವರೂಪವನ್ನು, ಹೊಗಳುವೆ, ಸ್ತೋತ್ರ ಮಾಡುವೆನೆಂದು ಅರಹುತ್ತಲಿದ್ದಾರೆ.

ಆರು ಭೂತಗಳಲ್ಲಿ ಆರಾರು ತತ್ವದಲ್ಲಿ
ಪೂರೈಸಿ ಇಪ್ಪ ಘನವನ್ನು । ಮನದಲ್ಲಿ
ಆರೈದು ತಿಳಿದಡವ ಮುಕ್ತ

ದೇವರು ಜಡವಾದ ಪಂಚಭೂತಗಳನ್ನು ಅಂದರೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಉತ್ಪತ್ತಿ ಮಾಡಿ ಅದರೊಂದಿಗೆ ಚೈತನ್ಯವಾದ ಆತ್ಮವೊಂದನ್ನು ಸೃಷ್ಟಿಸಿ ಆರು ಭೂತಂಗಳಾಗಿ ಮಾರ್ಪಡಿಸಿ ಇವಕ್ಕೆ ಆರಾರು ತತ್ವಗಳನ್ನು ಅಳವಡಿಸಿದ್ದಾನೆ. ವಿವರಣೆ ಹೀಗಿದೆ. ಕ್ರಿಯಾಜ್ಞಾನ, ಇಚ್ಛಾ ಜ್ಞಾನ, ಆದಿ, ಪರಾ, ಚಿಚ್ಛಕ್ತಿ ಎಂಬ ಷಡ್‌ವಿಧ ಶಕ್ತಿಗಳು, ಶ್ರದ್ಧಾ, ನಿಷ್ಠಾ, ಅವಧಾನ, ಅನುಭವ, ಆನಂದ, ಸಮರಸ ಷಡ್ವಿಧ ಭಕ್ತಿಗಳು, ನಿರಹಂಕಾರ, ಸುಮನ, ಸುಬುದ್ಧಿ, ಸುಚಿತ್ತ, ಸದ್ಭಾವ, ಷಡ್ವಿಧ ಹಸ್ತಗಳು, ಘ್ರಾಣ, ಜಿಹ್ವೆ, ನೇತ್ರ, ತ್ವಕ್, ಶ್ರೋತ್ರ, ಹೃದಯ ಎಂಬ ಷಡ್ವಿಧ ಮುಖಗಳು, ಮರವೆ ಅಜ್ಞಾನ ಹಾಗೂ ಮಾನವನ ಜನನ–ಮರಣವೆಂಬ ಪರಿಭವದ ದುಃಖಕ್ಕೆ ಈಡಾಗಿದ್ದಾನೆ. ಕಾರಣ ಅರುಹನ್ನು ಪಡೆದು, ಸುಜ್ಞಾನದ ಮಾರ್ಗವನ್ನು ಹಿಡಿದು. ಮಾಯೆ ಯನ್ನು ಗೆದ್ದು ದೇವನೊಡನೆ ಒಡವೆರೆದು ಒಂದಾದಾಗ ಮಾತ್ರ ಮುಕ್ತಾತ್ಮನಾಗುವನು ಎಂದು ಮನವರಿಕೆ ಮಾಡಿಕೊಳ್ಳುತ್ತಿದ್ದಾರೆ ಮಹಾದೇವಿ ಅಕ್ಕನವರು.

ಮಾಘ ಮಾಸವು ಪೋಗಿ ಮೇಗೆ ಬಂದಿತು ಚೈತ್ರ
ಬೇಗ ಮಾಮರವು ತಳಿರೇರೇ । ಅದ ಕಂಡು
ಕೂಗಿ ಕರೆಯಿತ್ತು ಕಳಕಂಠ॥

ಮಾಘ ಮಾಸದಲ್ಲಿ ಗಿಡ ಮರಗಳೆಲ್ಲಾ ಒಣಗಿ ಬರಡಾಗಿರುತ್ತವೆ. ಆ ಸಮಯದಲ್ಲಿ ಕೋಗಿಲೆಯು ಮೌನವಾಗಿರುತ್ತದೆ. ನಂತರ ಚೈತ್ರ ಮಾಸವು ಬಂದಾಗ ಗಿಡ ಮರಗಳು ಚಿಗು ರೊಡೆದು ಸುಂದರವಾಗಿ ಕಾಣತೊಡಗುವವು. ಆ ಸಮಯದಲ್ಲಿ ಮಾವಿನ ಮರದ ಚಿಗುರನ್ನು ತಿಂದಾಗ ಕೋಗಿಲೆಯ ಮತ ಮಧುರವಾಗಿ ಕುಹು..ಕುಹೂ..... ಎಂದು ಸಂತೋಷದಿಂದ ಹಾಡತೊಡಗುವುದು. ಯಾರನ್ನು ಕುರಿತು ಹಾಡುವುದು ಎಂದರೆ ತನ್ನ ಪ್ರಿಯತಮನಿಗಾಗಿ ಇದರಂತೆಯೇ ಜೀವಾತ್ಮನು ಅಜ್ಞಾನದಿಂದ ಮಾಯೆಯ ಮರೆವೆಯಿಂದ ಭವಬಂಧನದಲ್ಲಿ ಸಿಲುಕಿಕೊಂಡಿರುತ್ತಾನೆ. ಹಿಂದಿನ ಜನ್ಮದ ಸಂಸ್ಕಾರದಿಂದ ನಿಷ್ಕಾಮ ಕರ್ಮದ ಫಲದಿಂದ ಸದ್ಗುರುವಿನ ದರ್ಶನವಾಗಿ ದೀಕ್ಷೆಯನ್ನು ಹೊಂದಿದಾಗ ನಾನು ಯಾರು? ಎಲ್ಲಿಂದ ಬಂದೆ? ಈ ದೇಹ ಬಂದ ಪರಿ ಯಾವುದು? ಇನ್ನು ಮುಂದೆ ಹೊಂದುವ ಗತಿ ಯಾವುದೆಂದು ಸುಜ್ಞಾನ ತಲೆದೋರಿದಾಗ ಸಾಧನೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಚಿತ್ತ ಚಾಂಚಲ್ಯತೆಯನ್ನು ಕಳೆದುಕೊಂಡು ಏಕಾಗ್ರತೆ ಸಾಧಿಸಿ ಅಂತರಂಗ ವನ್ನು ಪರಿಶುದ್ಧಿಗೊಳಿಸಿ ತನ್ನ ಹೃದಯಕಮಲದಲ್ಲಿ ಶರಣ ಸತಿಯು ಲಿಂಗ ಪತಿಯ ಬರುವಿಕೆಗಾಗಿ ಹಂಬಲಿಸುವ ರೀತಿಯನ್ನು ಚನ್ನ ಸತಿ ಅಕ್ಕಮಹಾದೇವಿಯವರು ಉಸುರಿದ್ದಾರೆ.

(ಮುಂದುವರಿಯುವುದು..)

ಮತ್ತೊಮ್ಮೆ ಉಳವಿಯ ಮಹಾಮನೆಗವಿಯೆಡೆಗೆ

ಲೇಖಕರು: . ಶರಣ ಗಂಗಾಧರ ಆರ್. ಕಟ್ಟಿ

ಕಲ್ಯಾಣ ಕ್ರಾಂತಿಯ ನಂತರ ವಚನಸಾಹಿತ್ಯದ ರಕ್ಷಣೆಗಾಗಿ ಚನ್ನಬಸವಣ್ಣನವರ ನೇತೃತ್ವದಲ್ಲಿ ಎಲ್ಲ ಶರಣರು ಸಹ್ಯಾದ್ರಿಯ ದಂಡಕಾರಣ್ಯದಲ್ಲಿರುವ ಉಳವಿಯ ಕಡೆಗೆ ಬಂದು ಅಲ್ಲಿರುವ ಶಿಲಾಗವಿಗಳಲ್ಲಿ ಆಶ್ರಯ ತೆಗೆದುಕೊಂಡು ಪ್ರಾಕೃತಿಕ ವಿಕೋಪಗಳಿಂದ ಮರೆಮಾಚಿಕೊಂಡರು. ಅಂತಹ ದಂಡಕಾರಣ್ಯದ ಶಿಲಾಗವಿಗಳಲ್ಲಿಯೇ ಶರಣರು ವಿಶ್ರಮಿಸಿದರು. ಚನ್ನಬಸವಣ್ಣನವರು ಕಲ್ಯಾಣದ ಸೈನಿಕರೊಂದಿಗೆ ಯುದ್ಧ ಮಾಡುವಾಗ ಗಾಯಗೊಂಡಿದ್ದರು ಮತ್ತು ಮರ್ತ್ಯಕ್ಕೆ ತಾವು ಬಂದ ಕಾರ್ಯ ಪೂರ್ಣವಾಯಿತೆಂದು ಆಕಳಗವಿಯಲ್ಲಿ ಕಾಯಸ್ಥ ಲಿಂಗೈಕ್ಯರಾದರೆಂದು ತಿಳಿದುಬರುತ್ತದೆ. ಈ ರೀತಿಯಾಗಿ ಕಲ್ಯಾಣದಲ್ಲಿ ಹೊತ್ತಿದ ಲಿಂಗಾಯತ ಧರ್ಮದ ಕ್ರಾಂತಿಯು ಉಳವಿಯ ಮಹಾಮನೆ ಗವಿಯಡೆಗೆ ಬಂದು ಅಸ್ತಂಗತವಾಯಿತು.

ಉಳವಿಯ ಚನ್ನಬಸವಣ್ಣನವರ ದೇವಾಲಯದಿಂದ ಶಿವಪುರದ ಮಾರ್ಗವಾಗಿ ಪೂರ್ವ ದಿಕ್ಕಿನೆಡೆಗೆ ಕನಿಷ್ಠ ಹನ್ನೆರಡು ಕಿಲೋಮೀಟರ ಅಂತರದಲ್ಲಿ ಬೃಹದಾಕಾರವಾಗಿರುವ ಶಿಲಾಗವಿ ಇದ್ದು ಅದಕ್ಕೆ "ಮಹಾಮನೆ ಗವಿ" ಎಂದು ಕರೆದುಕೊಂಡು ಬಂದ ವಾಡಿಕೆ. ಆ ಮಹಾಮನೆ ಗವಿಯಲ್ಲಿಯೇ ಸುಮಾರು ಮೂರು ತಿಂಗಳುಗಳ ಕಾಲ ಶರಣರು ಆಶ್ರಯ ತೆಗೆದುಕೊಂಡರೆಂದು ಮಾತಾಜಿಯವರ ಕಲ್ಯಾಣದ ಕ್ರಾಂತಿ ಕಾದಂಬರಿಯಿಂದ ತಿಳಿದುಬರುತ್ತದೆ. ಮತ್ತೊಂದು ವಿಶೇಷವೇನೆಂದರೆ ಕಾಡು ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಶರಣರು ಗವಿಯ ಮುಂದೆ ಹರಿಯುವ ನದಿಯ ದಿಕ್ಕನ್ನೆ ಬದಲಿಸಿ ಗವಿಯ ಒಳಗಡೆ ಹರಿಯುವಂತೆ ಮಾಡಿದರಂತೆ. ಗವಿಯ ಒಳಗಡೆ ಹೋಗುವಾಗ ಎದುರಿನ ಶಿಲೆಯ ಮೇಲಿನ ಕೊರೆತ ನೋಡಿದರೆ ಈಗ ಹಳ್ಳದಂತೆ ಹರಿಯುವ ನದಿಯು 800 ವರ್ಷಗಳ ಹಿಂದೆ ಅತೀ ದೊಡ್ಡ ಪ್ರಮಾಣದಲ್ಲಿ ಹರಿಯುತ್ತಿತ್ತೆಂದು ತಿಳಿಯುತ್ತದೆ. ರಭಸವಾಗಿ ಹರಿಯುವ ನದಿಯು ಸುತ್ತುವರೆದ ಅರಣ್ಯದಿಂದ ಅಪಾರ ಪ್ರಮಾಣದ ಕಲ್ಲು, ಮಣ್ಣು, ಮರಗಳ ಟೊಂಗೆ, ಬಡ್ಡೆಗಳನ್ನು ಹೊತ್ತು ತಂದು ಗವಿಯ ಒಳಭಾಗದಲ್ಲಿ ಶೇಖರಿಸಿದೆ. ಆದ್ದರಿಂದ ಗವಿಯ ಒಳಭಾಗದ ಅಂದಿನ ನೈಜ ಸ್ಥಿತಿಯು ಇಂದು ಪೂರ್ಣವಾಗಿ ಮರೆಮಾಚಿದೆ. ಮತ್ತು ಗವಿಯ ಶಿಲೆಯು ಪದರು ಶಿಲೆಯಾದ ಕಾರಣ ಕಾಲಾಂತರದಲ್ಲಿ ದೊಡ್ಡ ಪ್ರಮಾಣದ ಶಿಲಾಪದರುಗಳು ಕಳಚಿ ಬಿದ್ದಿವೆ. ಮತ್ತು ಸಹಸ್ರಾರು ಬಾವಲಿಗಳು ವಾಸವಾಗಿದ್ದು ಅವುಗಳ ವಿಸರ್ಜಿಸಿದ ಮಲಮೂತ್ರಗಳು ಹಾಗೂ ಅಪಾರ ಪ್ರಮಾಣದ ಜೊಂಡಿಗಗಳಿಂದ(ಜಿರಳೆ) ಗವಿಯು ತುಂಬಿ ಹೋಗಿದೆ. ಇವೆಲ್ಲವುಗಳಿಂದ ಉಸಿರಾಟಕ್ಕೆ ಅತೀ ತೊಂದರೆಯಾಗುವ ಪರಿಸ್ಥಿತಿಯುಂಟಾಗಿದೆ.

12ನೆಯ ಶತಮಾನದ ನಂತರ ಮಹಾಮನೆ ಗವಿಯೆಡೆಗೆ ಯಡೆಯೂರು ಸಿದ್ದಲಿಂಗೇಶ್ವರರು ನಂತರ ಶಿಶುವಿನಾಳದ ಷರೀಫರು, ನಾಗಲಿಂಗರು, ಮಡಿವಾಳ ಅಜ್ಜನವರು ಹೋಗಿದ್ದರೆಂದು ತಿಳಿದು ಬರುತ್ತದೆ. ಅದಾದ ನಂತರ ವಚನ ಸಾಹಿತ್ಯದ ಪಿತಾಮಹರಾದಂತಹ ಶರಣ ಫಕ್ಕೀರಪ್ಪ ಗುರುಪಾದಪ್ಪ ಹಳಕಟ್ಟಿಯವರು ಸಂಶೋಧನೆಗಾಗಿ ಗವಿ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದ ವಿಷಯವು " ಶಿವಾನುಭವ ಗೋಷ್ಠಿ" ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರೆ ಗವಿಯಲ್ಲಿ ಕತ್ತಲು ಆವರಿಸಿಕೊಂಡಿದ್ದರಿಂದ ಸಂಶೋಧನೆ ಮಾಡಲು ತೊಂದರೆಯಾದಂತೆ ತೋರುತ್ತದೆ.

ನಂತರ ವಿಶ್ವ ಕಲ್ಯಾಣ ಮಿಷನ್ ವತಿಯಿಂದ ಪೂಜ್ಯ ಬಸವಾತ್ಮಜೆಯ ಆಶೀರ್ವಾದದ ಮೇರೆಗೆ ಅಲ್ಲಮಪ್ರಭು ಸ್ವಾಮೀಜಿ ಹಾಗೂ ಚನ್ನಬಸವಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಮಹಾಮನೆ ಗವಿಯ ಸ್ವಚ್ಛತಾ ಕಾರ್ಯವು ಪ್ರಾರಂಭವಾಗಿ ಮೊಟ್ಟಮೊದಲು ಚನ್ನಬಸವಣ್ಣನವರ ಮೂರ್ತಿಯು ಗವಿಯ ಬಾಗಿಲಿನಲ್ಲಿ ಪೂಜ್ಯ ಮಾತಾಜಿಯವರ ಅಮೃತ ಹಸ್ತಗಳಿಂದ ಅನಾವರಣಗೊಂಡಿದೆ. ಆದರೆ ಸ್ವಚ್ಛತಾ ಕಾರ್ಯವು ಕಷ್ಟಸಾಧ್ಯವೆಂದು ಸ್ವಲ್ಪ ಕಾಲ ನಡೆದು ನಂತರ ಸ್ಥಗಿತಗೊಂಡಿತು.

2009ರ ಜನವರಿ ಮಾಹೆಯಲ್ಲಿ ಗವಿಯನ್ನು ನೋಡಲು ಹೋದ ನಮಗೆ (ರಾ. ಬ.ದಳ ಬೈಲಹೊಂಗಲ) ಮಹಾಮನೆ ಗವಿಯಲ್ಲಿಯ ವಿಶೇಷವನ್ನರಿತು 2009ರ ಮಾರ್ಚ ತಿಂಗಳಲ್ಲಿ ಹೋಳಿಹುಣ್ಣಿಮೆ ದಿನಗಳಲ್ಲಿ ಗವಿಯ ಸ್ವಚ್ಛತಾ ಕಾರ್ಯವನ್ನು ಪ್ರಾರಂಭಿಸಲು ತಿರ್ಮಾನಿಸಿದೆವು. ಅದರಂತೆ 2009ರ ಮಾರ್ಚ 6 ರಿಂದ 12 ರ ವರೆಗೆ ಪ್ರಥಮ ಮಹಾಮನೆ ಸ್ವಚ್ಛತಾ ಕಾರ್ಯವು ರಾಷ್ಟ್ರೀಯ ಬಸವ ದಳ ಬೈಲಹೊಂಗಲದವರಿಂದ ಪೂಜ್ಯ ಮಾತಾಜಿಯವರ ಆಶೀರ್ವಾದದೊಂದಿಗೆ ಪ್ರಾರಂಭವಾಯಿತು. ಸುಮಾರು 30 ಶರಣರು ಮೊದಲನೆ ಮಹಾಮನೆ ಸ್ವಚ್ಛತಾ ಕಾರ್ಯವನ್ನು ಪ್ರಾರಂಭಿಸಿದರು. ನಂತರ 2010 ಮಾರ್ಚ, 2011 ಮಾರ್ಚ, 2012 ಏಪ್ರಿಲ್, 2013 ಏಪ್ರಿಲ್ ಹೀಗೆ ಐದು ಬಾರಿ ಸ್ವಚ್ಛತಾ ಕಾರ್ಯವು ಜರುಗಿದ್ದು ಆರನೆಯ ಬಾರಿಗೆ 2014 ಏಪ್ರಿಲ್ 11 ರಿಂದ 23 ರವರೆಗೆ ಎಂದು ತಿರ್ಮಾನಿಸಲಾಗಿದೆ.

ಉಳವಿಯ ಮಹಾಮನೆ ಸ್ವಚ್ಛತಾ ಕಾರ್ಯವು ಪ್ರಾರಂಭವಾದುದು ಒಂದು ಪವಾಡವೆ ಸರಿ. ಮೊದಲ ಹಂತದಲ್ಲಿ ನಮ್ಮಿಂದ ಸ್ವಚ್ಛತಾ ಕಾರ್ಯವು ಸಾಧ್ಯವೇ ಇಲ್ಲ ಎನ್ನುವ ಮಟ್ಟಕ್ಕೆ ಬಂದರೂ ಪೂಜ್ಯ ಮಾತಾಜಿಯವರ ಸಂಕಲ್ಪ ಹಾಗೂ ಆಶೀರ್ವಾದದ ಶಕ್ತಿಯು ನಮ್ಮಲ್ಲಿ ಕ್ರಿಯಾಶಕ್ತಿಯಾಯಿತೊ ಎಂಬಂತೆ ಎಷ್ಟೇ ಕಷ್ಟವಾದರೂ, ಜೀವವೆ ಹೋಗುವಂತಹ ಪ್ರಮಯವೇ ಬಂದರೂ ಸ್ವಚ್ಛತಾ ಕಾರ್ಯವು ಭರದಿಂದ ಸಾಗಿದೆ. ಅದರ ಅನುಭಗಳನ್ನು ಈ ಸಮಯದಲ್ಲಿ ತಮ್ಮ ಜೊತೆ ಹಂಚಿಕೊಳ್ಳುವ ಬದಲು ಕಾರ್ಯವು ಪೂರ್ಣ ಫಲಪ್ರದವಾದಾಗ ಸೂಕ್ತವೆಂದು ತಿಳಿದು, ಕಾರ್ಯವನ್ನು ಕೈಗೆತ್ತಿಕೊಂಡ ಕಾರಣಗಳ ಬಗೆಗೆ ತಮ್ಮೆಲ್ಲರಿಗೂ ತಿಳಿಸಲು ಇಷ್ಟಪಡುತ್ತೇನೆ.

ಮೊದಲನೆಯದಾಗಿ ಬಸವಾದಿ ಶರಣರ ಸಂಕಲ್ಪವನ್ನು ಸಾಕಾರಗೊಳಿಸಲು ಧರೆಗೆ ಅವತರಿಸಿದ ಪೂಜ್ಯ ಮಾತಾಜಿಯವರು ಮಹಾಮನೆ ಗವಿಯ ಸ್ವಚ್ಛತಾ ಕಾರ್ಯವನ್ನು ಮಾಡಲು ಇಚ್ಛಿಸಿದ್ದು. ಅವರು ಮಾಡಿದ ಇಚ್ಛೆಯೇ ನಮಗೆ ಆ ಕಾರ್ಯ ಮಾಡಲು ಮೊದಲ ಸ್ಪೂರ್ತಿ. ಎರಡನೆಯದಾಗಿ ಕಲ್ಯಾಣದಿಂದ ಸಾಹಿತ್ಯದ ರಕ್ಷಣೆಗಾಗಿ ಉಳವಿಯಲ್ಲಿ ತಂಗಿದಂತಹ ಸುಮಾರು 12000 ಶರಣರ ಕುರುಹುಗಳು ಏನಾದರು ಸಿಗಬಹುದೆಂಬ ಅಪೇಕ್ಷೆ. ಮೂರನೆಯದಾಗಿ ಶರಣರು ನದಿಯನ್ನು ತಿರುವಿದ್ದರಿಂದ ಗವಿಯ ನೈಜ ಬಾಗಿಲವು ಮುಚ್ಚಿಹೋಗಿದೆ ಎಂಬ ಸಂಶಯ. ಬಾಗಿಲು ಸಿಕ್ಕರೆ ಅದರ ಒಳಗೆ ಶರಣರು ವಾಸಿಸಿದ ಬೃಹತ್ ಶಿಲಾ ಅರಮನೆ ಇರುವ ತರ್ಕ. ನಾಲ್ಕನೆಯದಾಗಿ ಹಾಗೂ ಸಹಜ ವಾಸ್ತವಿಕ ವಿಚಾರವೆಂದರೆ ಶರಣರು ಆಯ್ಕೆಮಾಡಿಕೊಂಡು ಕಲ್ಯಾಣದಿಂದ ಬಂದಂತಹ ಸ್ಥಳ. ಎಲ್ಲ ಶರಣರು ನೈಜವಾಗಿ ಉಳವಿಯಲ್ಲಿ ಮೆಟ್ಟಿದ ಧರೆ. ಅಂತಹ ಗವಿಯನ್ನು ಇಂದು ಎಲ್ಲರೂ ಯಾವುದೆ ಆತಂಕವಿಲ್ಲದೆ ಶರಣರ ಸ್ಮರಣೆಗಾಗಿ ನೋಡುವಂತಹ ಐತಿಹಾಸಿಕ ಯಾತ್ರಾ

ಸ್ಥಳವಾಗಿಸುವ ಯೋಜನೆ. ಗವಿಯನ್ನು ಸ್ವಚ್ಛ ಮಾಡಿದರೆ ಮಾತ್ರ ಅದರಲ್ಲಿ ಶರಣರ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಯೋಗ್ಯವಾಗುತ್ತದೆ.

ಇನ್ನೂ ಎರಡು ಮೂರು ಕಾರಣಗಳಿವೆ; ಅವುಗಳನ್ನು ಪೂಜ್ಯರೊಂದಿಗೆ ಚರ್ಚಿಸಿ ಅರ್ಥಪೂರ್ಣವೆನಿಸಿದಾಗ ಮಾತ್ರ ತಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಮೇಲಿನ ಎಲ್ಲ ಕಾರಣಗಳು ನಮಗೆ ಮಹಾಮನೆ ಗವಿಯ ಸ್ವಚ್ಛತಾ ಕಾರ್ಯವನ್ನು ಮುಂದುವರೆಸಿಕೊಂಡು ಹೋಗಲು ಸ್ಫೂರ್ತಿ ನೀಡಿವೆ. ಕೆಲವು ಶರಣರು ಮಹಾಮನೆಗವಿಯ ಸ್ವಚ್ಛತಾ ಕಾರ್ಯವನ್ನು ಮಾಡುವುದು ಉಪಯೋಗವಿಲ್ಲದ್ದು ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ, ಆದರೆ ಮಾತಾಜಿಯವರ ದೃಷ್ಟಿಕೋನದ ಬಗ್ಗೆ ನಮಗೆ ನಂಬಿಕೆ ಇದೆ. ಮಾತಾಜಿಯರು ಯಾವುದೇ ಉದ್ದೇಶವಿಲ್ಲದೆ ಯಾವ ಕಾರ್ಯವನ್ನೂ ಮಾಡುವುದಿಲ್ಲ. ಬಸವದೀವಿಗೆಯನ್ನು ಬೆಳಗಲು ಬಂದ ತಾಯಿಯವರು ನಮಗೆ ಕ್ರಿಯಾಶಕ್ತಿಯಾಗಿ ದೊರೆಯದಿದ್ದರೆ ಸ್ವಚ್ಛತಾ ಕಾರ್ಯವು ಸಾಧ್ಯವಾಗುತ್ತಿರಲಿಲ್ಲ. ಇದು ಉತ್ಪ್ರೇಕ್ಷೆಯ ಮಾತಲ್ಲ. ಗವಿಯನ್ನು ಸ್ವಚ್ಚತೆ ಮಾಡುವಾಗ ಎದುರಾದ ಕಷ್ಟಗಳ ಸಮಯದಲ್ಲಿ ನಾವು ಅನುಭವಿಸಿದ ನೈಜ ಸಂಗತಿ. ಪೂಜ್ಯರೇ ನಮ್ಮಲ್ಲಿ ಆವಿರ್ಭವಿಸಿ ಸ್ವಚ್ಛತಾ ಕಾರ್ಯವನ್ನು ಮಾಡಿಸುತ್ತಿದ್ದಾರೆ ಎಂಬ ಭಾವ. ಮೇಲ್ಕಾಣಿಸಿದ ಯಾವುದೇ ಒಂದು ಕಾರ್ಯವು ಸಾಕಾರ ಗೊಂಡರೂ ಪೂಜ್ಯರ ಅಡಿದಾವರೆಗಳಿಗೆ ನಮ್ಮ ಕಾರ್ಯ ಸಾಧನೆಯ ಪುಷ್ಪವು ಸಾರ್ಥಕ ಗೊಂಡಂತೆ.

ಕಾರಣ ಪೂಜ್ಯ ಮಾತಾಜಿಯವರ ಅನುಮತಿ ಹಾಗೂ ಆಶೀರ್ವಾದದೊಂದಿಗೆ ಕಾರ್ಯವು ಭರದಿಂದ ಸಾಗಿದೆ. ಈಗಾಗಲೇ ನಮ್ಮೊಂದಿಗೆ ಸವದತ್ತಿ, ಗೋಕಾಕ, ಅಸುಂಡಿ, ಇಚಲಕರಂಜಿ, ಬೆಂಗಳೂರು, ಕರಿಕಟ್ಟಿ, ಹೊಸೂರ, ಹುಬ್ಬಳ್ಳಿ, ಹೀರೇಕೋಡಿ, ಗಂಗಾವತಿ, ಇಟಗಿ ಶರಣರೆಲ್ಲರೂ ಕೈಜೋಡಿಸಿದ್ದಾರೆ ಮತ್ತು ಶಿವಪುರದ ಚನ್ನಬಸವೇಶ್ವರ ಸ್ವಾಮೀಜಿ ಯವರು ಆಶ್ರಯ ನೀಡಿದ್ದಾರೆ. ಸ್ಥಳೀಯ ಹಿರಿಯರಾದಂತಹ ಗೋಪಾಲ ಭಟ್ಟರು ನಮಗೆ ಪ್ರೋತ್ಸಾಹ ನೀಡಿದ್ದಾರೆ. ಮತ್ತು ಚನ್ನಬಸವೇಶ್ವರ ದೇವಸ್ಥಾನದ ಕಮಿಟಿಯವರು ಸಹಕಾರ ನೀಡಿದ್ದಾರೆ. ಮುಂಬರುವ ಕಾರ್ಯವು ಏಪ್ರಿಲ್ 11 ರಿಂದ 23ರ ವರೆಗೆ ಜರುಗಲಿದ್ದು ಸೇವೆ ಮಾಡಲು ಇಚ್ಛೆ ಉಳ್ಳವರು ತಮಗೆ ಸಾಧ್ಯವಾದ ದಿನಗಳಷ್ಟು ಉಳವಿಗೆ ಬಂದು ಸೇವೆಯಲ್ಲಿ ಕೈಜೋಡಿಸಲು ವಿನಂತಿಸಿಕೊಳ್ಳುತ್ತೇವೆ. ಈ ಕಾರ್ಯವನ್ನು ಅತೀ ಶೀಘ್ರ ಮುಗಿಸಿ ಮಾತಾಜಿ ಯವರ ಪಾದಕ್ಕೆ ಅರ್ಪಿಸಲು ಶಕ್ತಿ ನೀಡಲು ಗುರು ಬಸವಣ್ಣನವರಲ್ಲಿ ಪ್ರಾರ್ಥಿಸೋಣ.

ಶರಣು ಶರಣಾರ್ಥಿ.

ಸೇವೆ ಮಾಡಲು ಇಚ್ಛಿಸುವವರು ಕೆಳಕಾಣಿಸಿದ ಮೊ.ಸಂ. ಸಂಪರ್ಕಿಸಬೇಕು.

ಶರಣ ಸುಧೀರ ಶಂ. ವಾಲಿ 9945200343

ಶರಣ ಗಂಗಾಧರ ಆರ್. ಕಟ್ಟಿ 9008869252

ಸೂಚನೆ:

ಶರಣ ಮೇಳದಲ್ಲಿ ಬಿಡುಗಡೆಯಾದ "ಅನರ್ಘ್ಯ ರತ್ನ" ಸಾಕ್ಷ್ಯಚಿತ್ರ ಸಿಡಿಯು ಬೆಂಗಳೂರಿನ ಬಸವ ಮಂಟಪದಲ್ಲಿ ಲಭ್ಯವಿದೆ. ಬೇಕಾದವರು ಸಂಪರ್ಕಿಸಿರಿ:

ಮೊ : 9035987072, 9035987364

ಸೇವೆ–ಸಾತ್ವಿಕತೆಗಳ ಸಂಗಮ ಪೂಜ್ಯ ಶ್ರೀ ಗಂಗಮ್ಮಜ್ಜಿ

–ಮಾತೆ ಕಸ್ತೂರಿದೇವಿ

ತಾ॥ 13-01-2014 ರಂದು ಮಧ್ಯಾಹ್ನ ಸುಮಾರು ಒಂದು ಗಂಟೆಗೆ ಗಂಗಮ್ಮಜ್ಜಿಯವರ ಮೊಮ್ಮಗ ಫೋನ್ ಮಾಡಿ 92 ವಯಸ್ಸಿನ ಗಂಗಮ್ಮಜ್ಜಿಯವರು ಲಿಂಗೈಕ್ಯರಾದ ವಿಷಯ ತಿಳಿಸಿದರು. ಸುದ್ದಿ ಕೇಳಿದಾಗ ಬಹುದಿನಗಳಿಂದ ಆತ್ಮೀಯ ರಾದವರು ನಮ್ಮನ್ನಗಲಿದ ನೋವನ್ನು ಹೃದಯ ಅನುಭವಿಸಿತು. ಹಿಂದೆಯೆ ಮನಸ್ಸು-ಬುದ್ಧಿಗಳು ಅವರ ಒಡನಾಟದಲ್ಲಿ ಕಳೆದ ದಿನಗಳ, ಕ್ಷಣಗಳ ನೆನಪಿನಲ್ಲಿ ವಿಹರಿಸಲು ತೊಡಗಿದವು.

ಗಂಗಮ್ಮಜ್ಜಿಯವರು ಭೂಮಿಗೆ ಬಂದಾಗಿನಿಂದಲೂ ನೋವು–ನಲಿವುಗಳನ್ನು ಉಂಡು ಬೆಳೆದ ಚೇತನ. ತಮ್ಮ ಶೈಶವಾವಸ್ಥೆಯಲ್ಲಿಯೇ ತಾಯಿಯನ್ನು ಕಳೆದುಕೊಂಡು ದೊಡ್ಡಮ್ಮ ಮತ್ತು ಅಜ್ಜಿಯರ ಪ್ರೀತಿ, ವಾತ್ಸಲ್ಯ, ಆರೈಕೆಗಳಲ್ಲಿ ಬೆಳೆದರು. ಬಾಲ್ಯದಿಂದಲೂ ಪೂಜೆ, ವ್ರತ, ಪುರಾಣ ಪುಣ್ಯಕತೆಗಳ ಅಧ್ಯಯನ, ಶ್ರವಣಗಳಲ್ಲಿ ನಿರತರಾದರು ದೊಡ್ಡಮ್ಮ ಮತ್ತು ಅಜ್ಜಿಯರ ಕೆಲಸಕಾರ್ಯಗಳಲ್ಲಿ ನೆರವಾಗುತ್ತಿದ್ದರು. ಮುಂದೆ ಪ್ರಾಪ್ತ ವಯಸ್ಸಿಗೆ ಬಂದಾಗ ಹಿರಿಯರು ವೃತ್ತಿಯಿಂದ ವೈದ್ಯರಾಗಿದ್ದ ಶರಣ ಡಾ॥ ಬಸಪ್ಪನವ ರೊಂದಿಗೆ ವಿವಾಹ ನೇರವೇರಿಸಿದರು.

ಅಂದಿನ ದಿನಗಳಲ್ಲಿ ಸುತ್ತಮುತ್ತ ಹಳ್ಳಿಗಳಿಗೆ ವೈದ್ಯರ ಸೇವೆ ಅತ್ಯಗತ್ಯ ಎಂದರಿತ್ತಿದ್ದ ಡಾ॥ ಬಸಪ್ಪನವರು ತಮ್ಮ ಸೇವಾಮನೋಭಾವದಿಂದ ಬಹಳ ಬೇಗ ಜನಾನುರಾಗಿಗಳಾಗಿ ಹೆಸರು ಮಾಡಿದರು. ದೂರದಿಂದ ಬರುತ್ತಿದ್ದ ಅಶಕ್ತ–ಬಡ ರೋಗಿಗಳನ್ನು ಮನೆಗೆ ಕರೆತಂದು ಚಿಕಿತ್ಸೆ ಮಾಡುತ್ತಿದ್ದರು. ಗುರು ಬಸವ ವಾಣಿ 'ಅನ್ಯರಿಗೆ ಅಸಹ್ಯ ಪಡಬೇಡ 'ಎಂದಂತೆ ಪೂಜ್ಯ ಗಂಗಮ್ಮಜ್ಜಿಯವರು ರೋಗಿಗಳ ಕರುಣಾಜನಕ ಸ್ಥಿತಿಯಲ್ಲಿ ಅವರಿಗೆ ಗಂಜಿ, ಬಿಸಿನೀರು, ಔಷಧಿ ಕೊಟ್ಟು ಉಪಚರಿಸುತ್ತಾ ಪತಿಗೆ ತಕ್ಕ ಸತಿಯಾಗಿ ಆದರ್ಶ ದಾಂಪತ್ಯ ಜೀವನವನ್ನು ಯಶಸ್ವಿಯಾಗಿ ನಡೆಸಿದರು. ರೋಗಿಗಳು ಗುಣವಾಗಿ ಮರಳಿ ಊರಿಗೆ ಹೋಗುವಾಗ ಬಸ್ ಛಾರ್ಜಿಗೆ ಹಣ ಕೊಟ್ಟು ಕಳಿಸುತ್ತಿದ್ದ ಶರಣರಾದ ಡಾ॥ ಬಸಪ್ಪನವರು ರೋಗಿಗಳ ಪಾಲಿಗೆ ದೇವರಂತಿದ್ದರು. ಗಂಗಮ್ಮಜ್ಜಿಯವರು ಈ ಸೇವಾ ಕಾರ್ಯವನ್ನು ಮುಂದೆ ತಮ್ಮ ಜೀವನದುದ್ದಕ್ಕೂ ಪಾಲಿಸುತ್ತಾ ಬಂದರು. ಆಶ್ರಮದಲ್ಲಿ ಒಬ್ಬ ಶ್ರೇಷ್ಠ ಸಾಧಕರಂತೆ ಬದುಕಿದ ಅವರು ಆಶ್ರಮವಾಸಿಗಳಲ್ಲಿ ಯಾರಿಗಾದರು ಅನಾರೋಗ್ಯವಾದರೆ ತಮ್ಮ ಇಳಿವಯಸ್ಸಿನಲ್ಲಿಯೂ ಬೇಡವೆಂದರೂ ಕೇಳದೆ ಅವರ ಸೇವೆಗೆ ಮುಂದಾಗುತ್ತಿದ್ದರು. ಇವರ ಈ ಗುಣವೇ ಎಲ್ಲರನ್ನು ಹತ್ತಿರಕ್ಕೆ ಸೆಳೆಯುತ್ತಿತ್ತು. ಬೆಂಗಳೂರಿನ ಬಸವಮಂಟಪಕ್ಕೆ ಬರುವ ಶರಣರಿಗೆ, ಭಕ್ತರಿಗೆ ಗುರುಗಳ ಅನುಪಸ್ಥಿತಿಯಲ್ಲಿ ಗಂಗಮ್ಮಜ್ಜಿಯವರ ಸಾಂಗತ್ಯ–ದರ್ಶನ ಸಿಕ್ಕರೂ ಸಾಕು ಅವರಿಗೆಲ್ಲ ಸಂತೋಷ–ಸಮಾಧಾನವಾಗುತ್ತಿತ್ತು.

ನಮ್ಮ ಗಂಗಮ್ಮಜ್ಜಿಯವರು ಕೇವಲ ಸೇವೆಯಲ್ಲಿ ಅಷ್ಟೇ ಅಲ್ಲ ಅತಿಥಿ

ಸತ್ಕಾರದಲ್ಲಿಯೂ ಸದಾ ಮುಂದು. ಪ್ರೀತಿ, ವಿಶ್ವಾಸ, ಮಮತೆಗಳ ಆಗರವಾಗಿದ್ದ ಗಂಗಮ್ಮಜ್ಜಿಯವರಿಂದಲೇ ಅತಿಥಿ ಸತ್ಕಾರ ಮಾಡುವುದನ್ನು ಕಲಿಯಬೇಕು. ನಾವೆಲ್ಲ ಸಾಕಷ್ಟು ಜನ ಆಶ್ರಮವಾಸಿಗಳಿದ್ದರೂ ನಮಗೆ ಅವಕಾಶ ಕೊಡದೆ ತಾವೇ ಮುಂದಾಗಿ ನಿಂತು ರುಚಿ-ಶುಚಿ-ಸತ್ವಯುತ ಪ್ರಸಾದ ತಯಾರಿಸಿ ನಗುಮುಖದಿಂದ ಬಂದ ಗುರುಜಂಗಮಭಕ್ತರಿಗೆ ನೀಡಿ ತೃಪ್ತಿಪಡಿಸುವುದರಲ್ಲಿ ಸಂತೋಷ ಕಾಣುತ್ತಿದ್ದರು. ಬಂದವರು ಯಾರೇ ಇರಲಿ ವಯಸ್ಸಿನಲ್ಲಿ ತಮಗಿಂತ ಕಿರಿಯರಿರಲಿ, ಹಿರಿಯರಿರಲಿ ಎಲ್ಲರನ್ನು ಗೌರವಿಸುತ್ತಿದ್ದರು. ಹೀಗಾಗಿ ಅವರ ಸುತ್ತಾ ಯಾವಾಗಲು ವಯೋಭೇದವಿಲ್ಲದ ಭಕ್ತರ ಮತ್ತು ಸಾಧಕರ ಗುಂಪು ಸೇರುತ್ತಿತ್ತು. ಅವರು ನಮಗೆ ಬೋಧಿಸುತ್ತಿದ್ದುದು ಹೀಗೆ "ಮನೆ ಬಾಗಿಲಿಗೆ ಶತೃವೇ ಬರಲಿ ಮಿತ್ರರೇ ಬರಲಿ ಅವರನ್ನು ಕರೆದು ಪ್ರೀತಿ ಗೌರವಗಳಿಂದ ಉಪಚರಿಸಿ ಕಳಿಸುವುದು ನಮ್ಮ ಧರ್ಮ. ತಿಳಿಯಿತೆ ! ಎಂದು. ಇವರ ದಾಸೋಹ ಪ್ರಿಯತೆಗೆ ಸಾಕ್ಷಿಯಾಗಿ ಒಂದು ನಿದರ್ಶನವನ್ನು ಕೊಡುವೆ. ಒಮ್ಮೆ ಪೂಜ್ಯ ಮಾತಾಜಿಯವರು ಕೂಡಲಸಂಗಮದಿಂದ ಬೆಂಗಳೂರಿಗೆ ಕಾರಿನಲ್ಲಿ ಬರುತ್ತಿದ್ದಾಗ ತುಮಕೂರಿನ ಸಮೀಪದ ಕಳ್ಳಂಬೆಳ್ಳ ಬಳಿ ಭೀಕರ ಅಪಘಾತವಾಯಿತು. ಆಗ ಪೂಜ್ಯ ಮಾತಾಜಿಯವರಾದಿಯಾಗಿ ಇತರ ಗಾಯಾಳುಗಳನ್ನು ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ಸೇರಿಸಿದರು. ಈ ಸುದ್ದಿ ಎಲ್ಲಾ ಕಡೆ ಪ್ರಚಾರ ಪಡೆದು ಆಸ್ಪತ್ರೆಗೆ ಭೇಟಿ ಕೊಡುವ ಶರಣರ, ಭಕ್ತರ, ಅಭಿಮಾನಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿತ್ತು. ಹೀಗಾಗಿ ಆಸ್ಪತ್ರೆಗೆ ಬರುವ ಪ್ರತಿಯೊಬ್ಬರು ಎಳನೀರು, ಹಣ್ಣು, ಬ್ರೆಡ್‌ಬಿಸ್ಕತ್ ತರುತ್ತಿದ್ದರು. ಅಲ್ಲದೆ ಇನ್ನು ಕೆಲವರು ಭಕ್ತಿಯಿಂದ ಪ್ರಸಾದ ಮಾಡಿಕೊಂಡು ಬರುತ್ತಿದ್ದರು. ಇದರಿಂದ ಆಸ್ಪತ್ರೆಯಲ್ಲಿ ಪ್ರಸಾದ ಹಿಗ್ಗುತ್ತಿತ್ತು. ಪೂಜ್ಯ ಮಾತಾಜಿಯವರ ಸೇವೆಯಲ್ಲಿ ನಿರತರಾಗಿದ್ದ ಗಂಗಮ್ಮಜ್ಜಿಯವರು ಅಲ್ಲಿಯೂ ಬಂದವರಿಗೆ ಉಪಚರಿಸಿ ಕಳಿಸಲು ತೊಡಗಿದರು. ಇದರಿಂದ ಆಸ್ಪತ್ರೆಯೂ ದಾಸೋಹ ಮಂದಿರವಾಗಿ; ಭಕ್ತರು ತರುತ್ತಿದ್ದ ಆಹಾರ ಪದಾರ್ಥಗಳು ಪ್ರಸಾದವಾಗಿ ಪರಿವರ್ತನೆ ಹೊಂದುತ್ತಿತ್ತು.

ನಮ್ಮ ಗಂಗಮ್ಮಜ್ಜಿಯವರು ತಮ್ಮ ಇಳಿವಯಸ್ಸಿನಲ್ಲಿಯೂ ಭಕ್ತಿ-ಶ್ರದ್ಧೆ-ನಿಷ್ಠೆಯಿಂದ ಆಚರಿಸುತ್ತಿದ್ದ ಶಿವರಾತ್ರಿ ಹಬ್ಬದ ವೈಭವವನ್ನು ನೋಡಿ, ಆಚರಿಸಿ, ಅನುಭವಿಸಿಯೇ ಆನಂದಿಸಬೇಕು. ಪ್ರತಿವರ್ಷ ಬರುವ ಶಿವರಾತ್ರಿ ದಿನ ತಾವು ಬೆಳಗ್ಗೆ ಬೇಗ ಎದ್ದು, ಸ್ನಾನ ಮಾಡಿ ಶುಚಿರ್ಭೂತರಾಗಿ ಇಷ್ಟಲಿಂಗ ಪೂಜೆ, ಗುರು ಬಸವೇಶ್ವರ ಪೂಜಾವ್ರತ, ಮಂತ್ರಪಠಣ ಮುಗಿಸಿ ದಿನವೆಲ್ಲ ಉಪವಾಸವಿದ್ದು ರಾತ್ರಿ ಮತ್ತೆ ಸ್ನಾನ ಮಾಡಿ, ನಮ್ಮನ್ನೆಲ್ಲ ಸೇರಿಸಿಕೊಂಡು ಸಾಮೂಹಿಕ ಇಷ್ಟಲಿಂಗ ಪೂಜೆ, ಪ್ರಾರ್ಥನೆ, ಮಂತ್ರಪಠಣ, ವಚನಗಾಯನ, ವಚನ ಪಠಣ, ಶರಣಕಥಾಶ್ರವಣ ಹೀಗೆ ರಾತ್ರಿಯೆಲ್ಲಾ ಗುರುಲಿಂಗಜಂಗಮರ ಸ್ಮರಣೆಯಲ್ಲಿ ಜಾಗರಣೆಯನ್ನು ಮಾಡುತ್ತಿದ್ದರು. ಮರುದಿನ ಬೆಳಗ್ಗೆ ಸ್ನಾನ-ಪೂಜೆಯ ನಂತರವೇ ಪ್ರಸಾದನಿಲಯವನ್ನು ಪ್ರವೇಶಿಸಿ ಉತ್ಸಾಹದಿಂದಲೇ ಪ್ರಸಾದದ ತಯಾರಿಕೆಯಲ್ಲಿ ತೊಡಗುತ್ತಿದ್ದರು. ಅಂದು ವಿಶೇಷವಾಗಿ ಹೋಳಿಗೆಪ್ರಸಾದ ಮತ್ತು ಇತರ ಖಾದ್ಯಗಳನ್ನು ತಯಾರಿಸಿ ಎಲ್ಲರಿಗೂ ಎಡೆಮಾಡಿ

ನಂತರ ತಾವು ಸಮಾಧಾನ ಚಿತ್ತದಿಂದ ಪ್ರಸಾದ ಸ್ವೀಕಾರಕ್ಕೆ ಕೂಡುತ್ತಿದ್ದರು. ಅಜ್ಜಿಯವರ ಈ ಎಲ್ಲಾ ಚಟುವಟುಕೆಗಳು ಮುಗಿಯುವಾಗ ಮಧ್ಯಾಹ್ನ ಸುಮಾರು 3-4 ಗಂಟೆಯಾಗಿರುತ್ತಿತ್ತು. ಅಜ್ಜಿಯವರ ಈ ದಣಿವರಿಯದ ಉತ್ಸಾಹ ನಮ್ಮನ್ನೆಲ್ಲ ಬೆರಗುಗೊಳಿಸುತ್ತಿತ್ತು.

ಮೃದುವಚನವೇ ಸಕಲ ಜಪತಪಗಂಳಯ್ಯ; ಸದುವಿನಯವೇ ಸದಾಶಿವನ ಒಲುಮೆಯಯ್ಯ ಎಂಬ ಗುರು ಬಸವಣ್ಣನವರ ವಚನದಂತೆ ಗಂಗಮ್ಮಜ್ಜಿಯವರು ಗಟ್ಟಿಸಿ ಜೋರಾಗಿ ಮಾತಾಡಿದ್ದನ್ನು ನಾವು ಎಂದೂ ಕೇಳಿಯೇ ಇಲ್ಲ. ನಮ್ಮ ಗುರುಗಳಾದ ಪೂಜ್ಯ ಮಾತಾಜಿಯವರ ಪೂರ್ವಾಶ್ರಮದ ಮಾತೃಶ್ರೀಯವರಾದರು ರಕ್ತಸಂಬಂಧವನ್ನು ತಮ್ಮ ನಡೆನುಡಿಯಿಂದ ಎಂದಿಗೂ ವ್ಯಕ್ತಪಡಿಸಿದವರಲ್ಲ. ನಂಟರು ಬಂದರೆ ಸಮಯವಿಲ್ಲವೆನ್ನಿ ಎಂಬ ಗುರು ಬಸವ ವಾಣಿಗೆ ತತ್ವನಿಷ್ಟುರರಾಗಿ ನಡೆದುಕೊಳ್ಳುತ್ತಿದ್ದ ಗುರುದ್ವಯರ ಗರಡಿಯಲ್ಲಿ ಬಂಧುಗಳನ್ನು ಮತ್ತು ಭಕ್ತಿಸಂಬಂಧದ ಸಮತೋಲನವನ್ನು ಕಾಪಾಡಿಕೊಂಡು ಬಂದಿದ್ದು ಸಾಮಾನ್ಯ ಸಂಗತಿಯಲ್ಲ. ಬಾಲ್ಯದಲ್ಲಿಯೇ ತಮ್ಮ ತಂದೆಯನ್ನು ಕಳೆದುಕೊಂಡು ಭವಿಷ್ಯ ರೂಪಿಸಿಕೊಳ್ಳುವ ಪ್ರಯತ್ನದಲ್ಲಿದ್ದ ಮೊಮ್ಮಕ್ಕಳಿಗೆ ಅಜ್ಜಿಯವರು ಹೀಗೆ ಬೋಧಿಸುತ್ತಿದ್ದರು "ಮಕ್ಕಳೇ, ನೀವು ಚನ್ನಾಗಿ ಓದಿ, ಯಾರ ಹಂಗಿಗೂ ಒಳಗಾಗದೆ ದುಡಿದು ಬದುಕಿರಿ." ಎಂದು. ಅವರು ಮಠ ಅಥವ ಸಂಸ್ಥೆಯ ಯಾವ ವ್ಯವಹಾರಗಳಿಗೂ ಸಂಬಂಧಗಳನ್ನು ಬೆರೆಸಲಿಲ್ಲ. ಬದಲಿಗೆ ಬೆಂಗಳೂರಿನ ರಾಜಾಜಿನಗರದ ಈಗಿನ ಕೇಂದ್ರ ಕಾರ್ಯಾಲಯವಾಗಿರುವ ಬಸವ ಮಂಟಪವನ್ನು ಕಟ್ಟಿರುವ ನಿವೇಶನವನ್ನು ಉದಾರಹೃದಯದಿಂದ ದಾನ ಮಾಡಿ ಆಶ್ರಮ ನಿರ್ಮಿಸಲು ಕಾರಣರಾದರು. ಅಷ್ಟೇ ಅಲ್ಲ ತಮ್ಮ ಹುಟ್ಟೂರಾದ ಚಿತ್ರದುರ್ಗ ಜಿಲ್ಲೆಯ ಸಾಸಲಹಟ್ಟಿ ಗ್ರಾಮದಲ್ಲಿ ತಮ್ಮ ಹೆಸರಿನಲ್ಲಿದ್ದ ಜಮೀನನ್ನು ಅಕ್ಕಮಹಾದೇವಿ ಮಠ ಕಟ್ಟಲು ದಾನ ಮಾಡಿದರು. ಹೀಗೆ ತಮ್ಮ ತನುಮನಧನವನ್ನು ಗುರುಲಿಂಗಜಂಗಮಕ್ಕೆ ಸಲ್ಲಿಸಿ ಧನ್ಯರಾದರು.

ಗಂಗಮ್ಮಜ್ಜಿಯವರು ಪೂಜ್ಯ ಮಾತಾಜಿಯವರಿಗೆ ಶಿಷ್ಯರಾಗಿ, ಸಾಧಕರಿಗೆ, ಜಂಗಮರಿಗೆ ಪ್ರೀತಿಯ ಅಜ್ಜಿಯಾಗಿ, ಭಕ್ತರಿಗೆ ಹಿತೈಷಿಯಾಗಿ, ಆಶ್ರಮದಲ್ಲಿ ಆಶ್ರಯ ಪಡೆದಿದ್ದ ಅನಾಥ ಮಕ್ಕಳಿಗೆ ಮಮತೆಯ ತಾಯಿಯಾಗಿ ಬಾಳಿಬದುಕಿದ ಅಜ್ಜಿಯವರ ಆದರ್ಶಗಳು ನಮಗೆ ದಾರಿದೀಪವಾಗಲಿ. ಲೌಕಿಕ-ಪಾರಲೌಕಿಕ ಎರಡು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿ ತುಂಬು ಜೀವನ ನಡೆಸಿ ಲಿಂಗದೇವನ ಒಡಲೊಳು ಬೆರೆದ ಅಜ್ಜಿಯವರ ಶ್ರೀ ಪಾದಾರವಿಂದಗಳಿಗೆ ಶರಣು ಶರಣಾರ್ಥಿಗಳು.

★ ★

ವರ್ಧಂತಿ ಉತ್ಸವ

ಪೂಜ್ಯ ಮಾತಾಜಿಯವರು 69ನೆ ವರ್ಧಂತಿ ಉತ್ಸವವಯ ದಿ.16-3-2014ರಂದು ಬಸವ ಮಂಟಪದ ಮುಂಭಾಗದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಭಾಗವಹಿಸಬಹುದು.

'ಸಿದ್ಧಾಂತ ಶಿಖಾಮಣಿ' ಧರ್ಮಗ್ರಂಥವಲ್ಲ;

ಗುರು ಬಸವಣ್ಣನೇ ಲಿಂಗಾಯತಕ್ಕೆ ಆದಿ ಗುರು

– ಕೊಟ್ರೂರಸ್ವಾಮಿ ಎಂ.ಎಸ್

"ವೀರಶೈವ–ಲಿಂಗಾಯತ ಎರಡೂ ಒಂದೇ, ದ್ವಂದ್ವ ಭೇಡ' ಎಂಬ ಬೀದರಿನ ಜ್ಞಾನ ಯೋಗಾಶ್ರಮದ ಡಾ॥ ರಾಜಶೇಖರ ಸ್ವಾಮೀಜಿ ಬಸವೋತ್ತರ ಯುಗದಲ್ಲಿ ರಚಿತವಾದ "ಸಿದ್ಧಾಂತ ಶಿಖಾಮಣಿ'ಯೇ ವೀರಶೈವರ ಧರ್ಮಗ್ರಂಥವೆಂದು ಪ್ರತಿಪಾದಿಸುತ್ತಿರುವುದನ್ನು ನೋಡಿದರೆ ಹಾಸ್ಯಾಸ್ಪದವೆನಿಸುತ್ತದೆ.

ಸಿದ್ಧಾಂತ ಶಿಖಾಮಣಿ ಗ್ರಂಥ 16ನೇ ಶತಮಾನಲ್ಲಿ ರಚಿಸಿದ್ದೆಂದು ನಾಡಿನ ವಿದ್ವಾಂಸರು ಹಾಗೂ ಇತಿಹಾಸಕಾರರು ವಾದ ಮಂಡಿಸುತ್ತಿರುವಾಗ, ಬಸವೋತ್ತರ ಕಾಲದಲ್ಲಿ ರಚಿತವಾದ ಗ್ರಂಥವೊಂದನ್ನು ವೀರಶೈವ ಧರ್ಮಗ್ರಂಥವೆಂದು ವಾದ ಮಾಡುತ್ತಿರುವುದನ್ನು ಗಮನಿಸಿದರೆ ಇದರ ಹಿಂದೆ ವ್ಯವಸ್ಥಿತ ಷಡ್ಯಂತ್ರವೇ ಅಡಗಿರುವಂತಿದೆ.

ಋಷಿ ಅಗಸ್ತ್ಯ ಹಾಗೂ ರೇಣುಕರೆಂಬ ಎರಡು ಕಾಲ್ಪನಿಕ ಪುರಾಣ ವ್ಯಕ್ತಿಗಳ ನಡುವಿನ ಸಂವಾದವೇ 'ಸಿದ್ಧಾಂತ ಶಿಖಾಮಣಿ' ಎಂಬ ವಾದ ಮಂಡನೆ ನಿಜಕ್ಕೂ ಅಘಾತಕಾರಿ ವಿಷಯ. ಭಾರತದಾದ್ಯಂತ ಹರಡಿದ್ದ ಹಿಂದೂ ಧರ್ಮದಲ್ಲಿ ವೈಷ್ಣವ, ಶೈವ ಪರಂಪರೆ ಇತ್ತೆಂದು ಇತಿಹಾಸದ ಪುಟಗಳು ಸಾರುತ್ತವೆ. ಆದರೆ ಹಿಂದೂ ಧರ್ಮದಲ್ಲಿನ ವರ್ಣಾಶ್ರಮ, ಜಾತಿವ್ಯವಸ್ಥೆಯನ್ನು ಧಿಕ್ಕರಿಸಿಯೇ ಅಪ್ಪ ಬಸವಣ್ಣನವರು ಸರ್ವರೂ ಸಮಾನರೆಂದು ಸಾರಿದ್ದ 'ಲಿಂಗಾಯತ ಧರ್ಮದ ಜನ್ಮಕ್ಕೆ ಕಾರಣಕರ್ತರಾಗಿದ್ದು ಈಗ ಇತಿಹಾಸದ ಪುಟಗಳಲ್ಲಿ ಸೇರಿಹೋಗಿದೆ. ಸಿದ್ಧಾಂತ ಶಿಖಾಮಣಿ ಬಸವ ಪೂರ್ವದ ಯುಗದಲ್ಲಿನ ಶಿವ ಪುರಾಣದ ಪರಿಷ್ಕೃತ ರೂಪವಾಗಿದ್ದು ಅದರ ತುಂಬೆಲ್ಲಾ ಗುರು ಪರಂಪರೆ, ಪಾದಪೂಜೆ, ಅಡ್ಡಪಲ್ಲಕ್ಕಿ ಪರಂಪರೆಯನ್ನು ಆಮಾಯಕ ಜನತೆಯ ಮೇಲೆ ಹೇರುವುದಕ್ಕಾಗಿ ಬಸವಣ್ಣ ಲಿಂಗಾಯತ ಧರ್ಮ ಸ್ಥಾಪಕರೇ ಅಲ್ಲವೆಂದು ಗೊಂದಲ ಸೃಷ್ಟಿಸಿ ಬಸವಾದಿ ಪ್ರಮಥರ ತತ್ವಗಳಿಗೆ ಎಳ್ಳು–ನೀರು ಬಿಟ್ಟು ಕಲ್ಪಿತ ರೇಣುಕರ ಮತ್ತು ಪಂಚಾಚಾರ್ಯರ ಹೆಸರಿನಲ್ಲಿ ವಿಕ್ಷಿಪ್ತ ಪ್ರಕ್ಷಿಪ್ತ ದಾಖಲೆಗಳನ್ನು ಹೇರಳ ಧರ್ಮಗ್ರಂಥಗಳನ್ನು ಸೃಜಿಸಿ ಪಂಚಾಚಾರ್ಯರೇ ವೀರಶೈವ ಇಲ್ಲವೇ ಲಿಂಗಾಯತ ಧರ್ಮದ ಸ್ಥಾಪಕರು ಎಂದು ಸಾಧಿಸುತ್ತಿರುವವರು ಯಾರೆಂದು ಪರಾಮರ್ಶಿಸಿದರೆ ಸತ್ಯದ ಮಿಂಚೊಂದು ಹೊಳೆದೀತು!

ಬಸವ ಪೂರ್ವ ಯುಗದಲ್ಲಿ ಧರ್ಮ ಕೇವಲ ವ್ಯಕ್ತಿಗಳ ಕೈಯಲ್ಲಿನ ಅಸ್ತ್ರವಾಗಿತ್ತು. ಧರ್ಮದ ತಿರುಳೆಲ್ಲಾ ಪುರೋಹಿತಶಾಹಿಗಳಿಗೊಲಿದ ಸಂಸ್ಕೃತ ಭಾಷೆಯಲ್ಲಿದ್ದು ಜನಸಾಮಾನ್ಯರಿಗೆ ಕಬ್ಬಿಣದ ಕಡಲೆಯಾಗಿತ್ತು. ಆಗ 'ಕಾಯಕ' ತತ್ವವನ್ನು ವಚನ ಸಾಹಿತ್ಯದ ಮೂಲಕ ಜನತೆಗೆ ನೀಡಿ, ತನ್ನ ಅನುಯಾಯಿಗಳೆಲ್ಲಾ ಸರಿ ಸಮಾನರೆಂದು ಬಸವಣ್ಣ ಸಾರಿದರು. ಆದರೆ, 'ಸಿದ್ಧಾಂತ ಶಿಖಾಮಣಿ'ಯ ಮೂಲಕ ವರ್ಣಾಶ್ರಮ, ಜಾತಿವ್ಯವಸ್ಥೆಯನ್ನು ಪಂಚಾಚಾರ್ಯರು ಪುನಃ ಸೃಷ್ಟಿಸಿದರು. 'ಸಿದ್ಧಾಂತ ಶಿಖಾಮಣಿ' ವೀರಶೈವರ ಇಲ್ಲವೇ ಲಿಂಗಾಯತರ ಧರ್ಮಗ್ರಂಥವೆಂದು ಇಂದಿನವರೆಗೂ ಸುಳ್ಳು ಹೇಳುತ್ತಾ ಬರಲಾಗಿದೆ. ಸಂಶೋಧಕರನ್ವಯ 'ಸಿದ್ಧಾಂತ ಶಿಖಾಮಣಿ' ಗ್ರಂಥದಲ್ಲಿ ವಿಶ್ಲೇಷಿತವಾಗಿರುವ ಆಗಮಗಳನ್ನು–ವೈಷ್ಣವಾಗಮ,

ಶೈವಾಗಮ ಶಾಕ್ತಾಗಮ–ನೋಡಿದಾಗಲೂ ಅಲ್ಲಿ ವೀರಶೈವಾಗಮ ಎಂಬ ಮಾತೇ ಇಲ್ಲ. ಆದರೆ ಹೊಸ ವಾದ ಮಂಡಿಸುತ್ತಿರುವ ಈ ಪಂಗಡ 28 ಶೈವಾಗಮಗಳೇ ವೀರಶೈವಾಗಮಗಳೆಂದು ಸಾಧಿಸುತ್ತಿರುವುದಕ್ಕೆ ಕಾರಣವೇನು? ಆಗಮಗಳ ಕುರಿತಂತೆ ಬಸವಣ್ಣ ತನ್ನ ವಚನ ವೊಂದರಲ್ಲಿ 'ಆಗಮದ ಮೂಗು ಕೊಯ್ಯುವೆ' ಆಗಮವು ಅನೃತದ ನುಡಿ' ಎಂದಿದ್ದಾನೆ. ಅಂತೆಯೇ ಅಲ್ಲಮ, 'ಆಗಮಗಳೆಂಬವು ಋಷಿ ಮುನಿಗಳ ಮರುಳಾಟ' ಎಂದು ಕರೆದಿದ್ದಾನೆ. 'ಆಗಮಗಳೆಲ್ಲವೂ ಕೊಟ್ಟಣ ಕುಟ್ಟಿದಂತೆ ನುಚ್ಚು ತೌಡು' ಎಂದು ಅಕ್ಕಮಹಾದೇವಿ ತೆಗಳಿದ್ದಾರೆ.

ಪುರೋಹಿತ ವರ್ಗದ ಷಡ್ಯಂತ್ರ

ಬಸವೋತ್ತರ ಕಾಲದಲ್ಲಿ ರಚಿಸಲಾಗಿರುವ 'ಸಿದ್ಧಾಂತ ಶಿಖಾಮಣಿ' ಗ್ರಂಥವೇ ವೀರಶೈವರ ಧರ್ಮ ಗ್ರಂಥವೆಂದು ಸಾರುತ್ತಿರುವುದು ಲಿಂಗಾಯತರನ್ನು ಪುರೋಹಿತ ಶಕ್ತಿಯ ಷಡ್ಯಂತ್ರಕ್ಕೆ ಸಿಲುಕಿಸುವ ವ್ಯವಸ್ಥಿತ ತಂತ್ರವಾಗಿ ತೋರುತ್ತಿದೆ. 'ಸಿದ್ಧಾಂತ ಶಿಖಾಮಣಿ'ಯಲ್ಲಿ ಹಿಂದೂ ಧರ್ಮದ ವಿಷ ಬೀಜಗಳೆಂದೇ ನಿರ್ಧರಿತವಾದ ವರ್ಣಾಶ್ರಮ ಮತ್ತು ಜಾತಿ ವ್ಯವಸ್ಥೆಯನ್ನು ಯಥಾವತ್ತಾಗಿ ಪ್ರತಿಪಾದಿಸಲಾಗಿದೆ. ಗುಡಿಗಳಲ್ಲಿನ ದೇವರುಗಳು ಕೆಲವರಿಗೆ ಸೀಮಿತವಾಗಿದ್ದ ಕಾಲದಲ್ಲಿ ಸಮಾಜದ ಅಂತ್ಯಜರಿಗೂ ಲಿಂಗದೀಕ್ಷೆ ನೀಡಿ ಸಮಾನತೆ ಮೆರೆದ ಗುರು ಬಸವಣ್ಣನವರು ಇವರ ಪ್ರಕಾರ ಕೇವಲ ಸಮಾಜ ಸುಧಾರಕರಾಗಿರುವುದು ಪುರೋಹಿತಶಾಹಿ ಮನಸ್ಥಿತಿಗೆ ಹಿಡಿದ ಕನ್ನಡಿಯಂತಿದೆ. ಧರ್ಮವೆಂಬುದು ಕೆಲವೇ ಕೆಲವು ಪ್ರಭುಗಳ ಕೈಯಲ್ಲಿನ ಚಾಟಿಯಾಗಿದ್ದಾಗ 'ಉಳ್ಳವರು ಶಿವಾಲಯವ ಮಾಡುವರು, ನಾನೇನ ಮಾಡಲಿ ಬಡವನಯ್ಯ' ಎಂಬಂತಹ ವಚನ ರಚಿಸಿ ಯಾವುದೇ ಧರ್ಮಾಂಧತೆಗೆ ಒಳಗಾಗದೇ,

'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ,
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮುಕುಟ,
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಪಾದ
ಅಗಮ್ಯ ಅಗೋಚರ, ಅಪ್ರತಿಮ ಲಿಂಗವೇ
ಕೂಡಲ ಸಂಗಮದೇವಾ ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ' ಎಂದು ಜಗತ್ತಿನ ಜನತೆಗೆ ಇಷ್ಟಲಿಂಗವನ್ನು ನೀಡಿದ್ದು ಬಸವಣ್ಣನವರಲ್ಲದೇ ಮತ್ತಿನ್ಯಾರು?

ಬಸವಾದಿ ಶರಣರ ಹನ್ನೆರಡನೇ ಶತಮಾನದಲ್ಲಿನ ಕಲ್ಯಾಣ ಕ್ರಾಂತಿ ನಂತರವೇ 'ಲಿಂಗಾಯತ ಧರ್ಮ ರೂಪುಗೊಂಡಿತು. ನಂತರವಷ್ಟೇ ಇದರೊಳಕ್ಕೆ ನುಸುಳಿದ ಪುರೋಹಿತ ವರ್ಗ ಲಿಂಗಾಯತ ಧರ್ಮಕ್ಕೆ ಮತ್ತೆ ಜಾತಿ ಪದ್ಧತಿಯ ಹಾಗೂ ವರ್ಣಾಶ್ರಮವನ್ನು ಗಂಟುಹಾಕಿ ಕಲುಷಿತಗೊಳಿಸಿದ್ದನ್ನು ಇತಿಹಾಸದ ಪುಟಗಳು ಸಾರುತ್ತಿವೆ.

ಇವರು ನಂಬುತ್ತಿರುವ ವೇದಾಗಮಗಳ ಕುರಿತಂತೆ ಅಂದು ಬಸವಣ್ಣನವರು, ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ಆಗಮದ ಮೂಗ ಕೊಯ್ಯುವೆ, ತರ್ಕ ಬೆನ್ನ ಬಾರನೆತ್ತುವೆ, ಮಹಾದಾನಿ ಕೂಡಲಸಂಗಮದೇವಾ, ಮಾದಾರ ಚನ್ನಯ್ಯನ ಮನೆಯ ಮಗ ನಾನು, ಎಂದರು. ಹಾಗಿರುವಾಗ ನಾವೇ ಧರ್ಮ ಸ್ಥಾಪಕರು ಎಂದು ಹೇಳುವ ಪಂಚಪೀಠಾಧೀಶರ ಮಾತನ್ನು ನಂಬಬೇಕೆ?

'ಎನಗಿಂತ ಕಿರಿಯರಿಲ್ಲ' ಎಂದು ಜಗತ್ತಿಗೆ ತೋರಿಸಿಕೊಟ್ಟ ಕಾಯಕಯೋಗಿ ಬಸವಣ್ಣ ಅವರು ಸಮಾಜದ ಅಂತ್ಯಜರನ್ನೆಲ್ಲಾ ಉದ್ಧರಿಸುವ ದಾರಿಯಲ್ಲಿ ಸಾಗಿ, ಸರ್ವರೂ ಸಮಾನರು, ಲಿಂಗಧಾರಿಗಳೆಲ್ಲಾ ಒಂದೇ ಎಂದು ಸಾಧಿಸಿದ್ದೇ ಈ ಪುರೋಹಿತ ವರ್ಗಕ್ಕೆ ಮುಳುವಾಯಿತು. ಹಾಗಾದಾಗ ನಮಗಿನ್ನಾವ ಬೆಲೆ ಎಂಬ ಕುತರ್ಕದಿಂದಲೇ 'ಸಿದ್ಧಾಂತ ಶಿಖಾಮಣಿ' ಪಂಚಪೀಠ ಪಂಚಪೀಠಾಧೀಶ್ವರ'ರನ್ನು ಸೃಷ್ಟಿಸಲಾಯಿತು.

ವೀರಶೈವ ಲಿಂಗಾಯತ ಒಂದೇ ಅಲ್ಲ

ಇನ್ನು ವೀರಶೈವ ಮತ್ತು ಲಿಂಗಾಯತ ಒಂದೇ ಎಂದು ಸಾರುತ್ತಿರುವುದರ ಕುರಿತಂತೆ ಹೇಳುವುದಾದರೆ, 12ನೇ ಶತಮಾನದ ಪೂರ್ವದಲ್ಲಿ ಶೈವ ಪರಂಪರೆ ರೂಢಿಯಲ್ಲಿತ್ತು. ಶೈವರಲ್ಲಿನ ಒಂದು ಪಂಗಡವೇ ವೀರಶೈವ (ಆಂಧ್ರ ಅಥವಾ ತೆಲುಗು ಮೂಲ) ಪೂರ್ವದಲ್ಲಿ ಮಾಂಸಾಹಾರಿಗಳಾಗಿದ್ದ ಇವರು ಬಸವ ತತ್ವಗಳಿಗೆ ಮಾರು ಹೋಗಿ, ಲಿಂಗಾಯತರಾದರೆಂದು ಇತಿಹಾಸ ಹೇಳುತ್ತದೆ. ಶೈವರಲ್ಲಿನ ಎಂಟು ಪಂಗಡಗಳಲ್ಲಿ ಒಂದಾಗಿದ್ದ ವೀರಶೈವರು ಲಿಂಗದೀಕ್ಷೆ ಪಡೆದು ಲಿಂಗಾಯತರಾದರೆಂಬುದಕ್ಕೆ ಪುರಾವೆಗಳಿವೆ. ಕರೆಯಲು ಇಲ್ಲವೇ ಬಳಸಲು ಸುಂದರವಾಗಿ ತೋರುತ್ತದೆ ಎಂಬ ಕಾರಣದಿಂದ ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂದು ಸಾಧಿಸುತ್ತಿ ರುವುದು ಮೌಢ್ಯ

ಹಿಂದೂ ಧರ್ಮದಲ್ಲಿನ ಜಾತಿ ಪದ್ಧತಿ, ವರ್ಣಾಶ್ರಮ, ಬಲಿ, ಹೋಮ ಯಜ್ಞಗಳಂತಹ ಸುಲಿಗೆ ಪ್ರೇರಿತ ಆಚರಣೆಗಳನ್ನು ವಿರೋಧಿಸಿಯಲ್ಲವೇ ಭಾರತದಲ್ಲಿ ಬೌದ್ಧಧರ್ಮ ಜನ್ಮ ತಳೆದಿದ್ದು. ಇದರ ಭಯದಿಂದ ಪುರೋಹಿತ ವರ್ಗ ಬೌದ್ಧ ಧರ್ಮದ ಮೇಲೆ ಮಾಡಿದ ನಿರಂತರ ಪ್ರಹಾರದಿಂದಾಗಿ ಬೌದ್ಧ ಬಿಕ್ಕುಗಳು ನೆಲೆಯನ್ನರಿಸಿ ಭಾರತ ತೊರೆದರು. ಹಾಗೆಯೇ 'ಕಲ್ಯಾಣ ಕ್ರಾಂತಿ'ಯ ನಂತರ ಬಸವಾನುಯಾಯಿ ಗಳಿಂದಾಗಿ ತಮಗೆ ನೆಲೆಯಿಲ್ಲವಾಗುವುದೆಂಬ ಭಯದಿಂದಲೇ 'ಲಿಂಗಾಯತ' ಧರ್ಮಕ್ಕೆ ಪುರೋಹಿತ ವರ್ಗವನ್ನು ವ್ಯವಸ್ಥಿತವಾಗಿ ಮಿಶ್ರಣ ಮಾಡುತ್ತಾ ಲಿಂಗಾಯತ ಧರ್ಮ ಸ್ಥಾಪಕ ಬಸವಣ್ಣನವರನ್ನೇ ದೂರ ಸರಿಸಲು ಒಂದು ವರ್ಗ ಪ್ರಯತ್ನಿಸುತ್ತ ಬಂದಿದೆ, ಅದಕ್ಕೆ ಏನೆನ್ನೋಣ?!

ಉದಯವಾಣಿ ಕೃಪೆ, ದಿ.23-01-2014

ವಚನ ಕಿರಣ

ಲಿಂಗದೇವನಲ್ಲಿ ಶ್ರದ್ಧೆಯಿಲ್ಲ
ಸಾಹಿತ್ಯದಲ್ಲಿ ಆಳವಾದ ಜ್ಞಾನವಿಲ್ಲ
ಗುರುವಿನಲ್ಲಿ ಅಚಲ ಭಕ್ತಿಯಿಲ್ಲ
ಆಚರಣೆಯಲ್ಲಿ ಅಳವಡಿಕೆಯಿಲ್ಲ
ಸತ್ಯ ಸಾಧನೆ ಮೊದಲೇ ಇಲ್ಲ
ಜ್ಞಾನಿಯಂತೂ ತಾನಲ್ಲ
ಜ್ಞಾನಿಗಳ ಮಾತಲ್ಲೂ ನಂಬಿಕೆ ಇಲ್ಲ
ಭಕ್ತನಂತೆ ನಟನೆ ಮಾಡುತ
ಭಂಡರಾಗಿ ಬಾಯಿ ಮಾಡುತ
ಹಾರಾಡುವ ಅರೆಬರೆ ಭಕ್ತರ ಕಂಡು
ನಗುವ ನಮ್ಮ ಲೀಲಾ ವಿಶೇಷ ಲಿಂಗದೇವ.

–ಪೂಜ್ಯ ಶ್ರೀ ಮಾತೆ ಜ್ಞಾನೇಶ್ವರಿ



ಹೊಸ ವರ್ಷದ ಶುಭಾಶಯಗಳು
ಜ್ಞಾನದ ಬಲದಿಂದ ಅಜ್ಞಾನದ ಕೇಡು
2014ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್

ತಿಂಗಳುಗಳು											
ಜನವರಿ ಏಪ್ರಿಲ್ ಜುಲೈ	ಫೆಬ್ರವರಿ ಆಗಸ್ಟ್	ಮಾರ್ಚ್ ನವೆಂಬರ್	ಮೇ	ಜೂನ್	ಅಕ್ಟೋಬರ್	ಸೆಪ್ಟೆಂಬರ್ ಡಿಸೆಂಬರ್	ತಾರೀಖು				
ವಾರಗಳು											
ಬುಧ	ಶನಿ	ಮಂಗಳ	ಗುರು	ಭಾನು	ಶುಕ್ರ	ಸೋಮ	1	08	15	22	29
ಗುರು	ಭಾನು	ಬುಧ	ಶುಕ್ರ	ಸೋಮ	ಶನಿ	ಮಂಗಳ	2	09	16	23	30
ಶುಕ್ರ	ಸೋಮ	ಗುರು	ಶನಿ	ಮಂಗಳ	ಭಾನು	ಬುಧ	3	10	17	24	31
ಶನಿ	ಮಂಗಳ	ಶುಕ್ರ	ಭಾನು	ಬುಧ	ಸೋಮ	ಗುರು	4	11	18	25	
ಭಾನು	ಬುಧ	ಶನಿ	ಸೋಮ	ಗುರು	ಮಂಗಳ	ಶುಕ್ರ	5	12	19	26	
ಸೋಮ	ಗುರು	ಭಾನು	ಮಂಗಳ	ಶುಕ್ರ	ಬುಧ	ಶನಿ	6	13	20	27	
ಮಂಗಳ	ಶುಕ್ರ	ಸೋಮ	ಬುಧ	ಶನಿ	ಗುರು	ಭಾನು	7	14	21	28	

ರಚಿಸಿದವರು : ಮ.ಯ. ದೊಡಮನಿ, ಸದಸ್ಯರು, ಕರ್ನಾಟಕ ರಾಜ ಭಾಷಾ(ವಿಧಾಯೀ) ಆಯೋಗ, ಬೆಂಗಳೂರು - 9.

ಆಚಾರವೇ ಸ್ವರ್ಗ ಅನಾಚಾರವೇ ನರಕ · ಕಾಯಕವೇ ಕೈಲಾಸ ದಾಸೋಹವೇ ದೇವಧಾಮ · ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ ಸದುವಿನಯವೇ ಸದಾಶಿವನ ಒಲುಮೆ

ಅಮರ ಚೇತನ

ಅಮರವಾಯಿತಿಂದು ದಿವ್ಯ ಚೇತನ
ಬೆಳಕ ನೀಡಿದಂಥ ಧರ್ಮ ಚಿಂತನ ॥ಪ॥

ಸರ್ವ ಶ್ರೇಷ್ಠ ಜ್ಞಾನ ಸಿಂಧು
ದಿವ್ಯ ಪ್ರಭೆಯ ಶಕ್ತಿಯೊಂದ
ಭುವಿಗೆ ತಂದ ಕೀರ್ತಿ ವೆತ್ತ ದಿವ್ಯ ಚೇತನ ॥ಪ॥

ಕಲ್ಯಾಣ ಗುಣಗಳ ಸಂಗಮವೂ
ಸಕಲ ತರಂಗಿಣಿ ಸಾಧನೆಯೂ
ಅಷ್ಟಾವರಣದ ಸಂಭ್ರಮ ನಿಮ್ಮದು
ಷಡಾಚಾರದ ಬಟ್ಟೆಯು ನಿಮ್ಮದು
ಭವಗೆಡಿಪ ಬದುಕಿನ ಬದ್ಧತೆಯ ಚೇತನ ॥ಪ॥

ಹುಟ್ಟಿನ ಗುಟ್ಟನ್ನು ಅರಿತಿಹ ನೀವು
ಸೃಷ್ಟಿಗೊಡೆಯನಿಗೆ ಇಷ್ಟವಾಗಿ
ಕಷ್ಟತೆರೆದ ಈ ಬದುಕಲ್ಲಿ ದಿಟ್ಟತನವ ತೋರಿ
ದೇವ ಕುಸುಮವಾಗಿ ದಿವ್ಯ ದಿಬ್ಬ
ಸೇರಿದಂಥ ಅಮರ ಚೇತನ ॥ಪ॥

ಹಬ್ಬಿದ ಬಳ್ಳಿಯ ಸಂಕಲ್ಪ
ಕಬ್ಬಿನ ಸಿಹಿಯ ಸಾರ್ಥಕ್ಯ
ಗಂಗಮ್ಮನೆಂಬ ನಾಮದಿ ಬಂದ
ಹೃನ್ಮನ ಕಾಯದ
ವೈಶಿಷ್ಟ್ಯಹೊಂದಿದ್ದ ಅಮರ ಚೇತನ ॥ಪ॥

ಒಡಲ ಕುಡಿಗೆ ಆಶಿಸಲಿಲ್ಲ
ನೆರೆದ ಸಿರಿಯ ಭ್ರಮಿಸಲೂ ಇಲ್ಲ
ಭಕ್ತಿ ಭಾವ ಸಂಬಂಧ
ಶರಣ ಸಂಕುಲ ನಮದೆಂದ
ಜಗದ ತಾಯಿಗೆ ತಾಯಾದ
ಓ ನಮ್ರ ಚೇತನ ಓ ಹೋ ದಿವ್ಯ ಚೇತನ ॥ಪ॥

ಬಸವಕ್ರಾಂತಿ ಮುನ್ನ ದಿನದ
ಬಸವಧರ್ಮಪೀಠ ಪ್ರಭೆಯ ದಿನದ ಬೆಳಕಲಿ
ಬದುಕ ಯಾತ್ರೆ ಮುಗಿಸಿದಂಥ ಓ.. ದಿವ್ಯ ಚೇತನ
ಅಮರರಾದಿರಿ ಅಮರರಾದಿರಿ
ನೀವು ಅಮರರಾದಿರಿ. ॥ಪ॥

– ಕೆ.ವೀರೇಶ್, ಬಸವ ಗಂಗೋತ್ರಿ



ಡಾ॥ ಮಾತಾಜಿಯವರ ಕುರಿತ ಅನರ್ಘ್ಯ ರತ್ನ ಕ್ಯಾಸೆಟ್ ಬಿಡುಗಡೆ



ಪೂಜ್ಯ ಶ್ರೀ ಸಿದ್ಧರಾಮ ಚೈತನ್ಯ ಸ್ವಾಮಿಗಳವರಿಂದ ಬಸವ ಮಹಾಮನೆ ದರ್ಶನ ಎಂಬ ಪುಸ್ತಕ ಬಿಡುಗಡೆ


ಶರಣ ಬಸವಲಿಂಗ ಎಂಬ ಸಾಧಕರು ಬರೆದ ಸುಂದರ ಬದುಕಿನ ಸರಳ ಸೂತ್ರಗಳು
ಎಂಬ ಪುಸ್ತಕ ಎಸ್. ದಿವಾಕರವರಿಂದ ಬಿಡುಗಡೆ






ಶರಣಾಮೃತ ಮತ್ತು ಬಸವಗೀತ ಕ್ಯಾಸೆಟ್ ಬಿಡುಗಡೆ



ದೆಹಲಿಯ ಜಂತರ್ ಮಂತರ್‌ನಲ್ಲಿ ಲಿಂಗಾಯತ ಮಹಾರ್ಯಾಲಿ ಫೆಬ್ರವರಿ 17 ಮತ್ತು 18ರಂದು.



27ನೇ ಶರಣ ಮೇಳದ ಜನ ಸಮೂಹ



ಪ್ರತಿಭಾ ಶೀಲವಂತರಿಂದ 'ಕಲ್ಯಾಣ ಕರೆದಿದೆ ಕಲ್ಯಾಣ' ನೃತ್ಯ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 24+4 (COVER PAGES)